MANUVIKASA

# ಮನುವಿಕಾಸ

ಸಂಪುಟ - 7, ಸಂಚಿಕೆ - 1

ಸಂಪಾದಕರು : ಶ್ರೀ ಗಣಪತಿ ಭಟ್ಟ

ಸಂಪಾದಕೀಯ ಮಂಡಳಿ : ಶ್ರೀಮತಿ ಶುಭಾ ಪೈ, ಗಣಪತಿ ಹೆಗಡೆ, ಶ್ರೀಕಾಂತ ಹೆಗಡೆ

ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ ವಾರ್ತಾ ಪತ್ರ

ಖಾಸಗಿ ಪ್ರಚಾರಕ್ಕಾಗಿ ಮಾತ್ರ

EdelGive Foundation

An Edelweiss Initiative

ವಾರ್ತಾಪತ್ರ

# ಮನುವಿಕಾಸ ಸಂಸ್ಥೆಯಿಂದ ಬೀಜ ಸಂಗ್ರಹಣೆ ಮತ್ತು ಬೀಜ ಬ್ಯಾಂಕ್ ತರಬೇತಿ ಆಯೋಜನೆ



**ಮ**ನುವಿಕಾಸ ಸ್ವಯಂ ಸೇವಾ ಸಂಸ್ಥೆ ಮತ್ತು ಈಡೇಲ್‌ಗೀವ್ ಫೌಂಡೇಶನ್ ಸಹಯೋಗದೊಂದಿಗೆ ದಿನಾಂಕ 13/07/2024 ಶನಿವಾರದಂದು ಶಿರಸಿ ಪಟ್ಟಣದ ಭಾರತ ಸೇವಾದಳ ಸಭಾ ಭವನದಲ್ಲಿ ಮಹಿಳೆಯರಿಗಾಗಿ ಬೀಜ ಸಂರಕ್ಷಣೆ ಮತ್ತು ಬೀಜ ಬ್ಯಾಂಕ್ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು.

ಮನುವಿಕಾಸ ಸಂಸ್ಥೆಯ ಯೋಜನಾ ನಿರ್ದೇಶಕರಾದ ಶ್ರೀ ಮಂಜುನಾಥ ಹೆಗಡೆಯವರು ಸಂಸ್ಥೆಯ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿ ಸಂಸ್ಥೆಯು ಕಳೆದ ಎರಡು ದಶಕಗಳಿಂದ ನೆಲ, ಜಲ, ಆರೋಗ್ಯ ಸಂರಕ್ಷಣೆ ಹಾಗೂ ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಕೃಷಿಯಲ್ಲಿ ಉತ್ತಮ ಸುಧಾರಿತ ಬೀಜ ಬಳಕೆ ಮಾಡುವುದು ಬಹಳ ಮುಖ್ಯ. ಆಧುನಿಕ ಜಗತ್ತು ಮುಂದುವರೆದಂತೆ ಬೇಸಾಯ ಜಗತ್ತಿನ ಹಳೆಯ ಕೃಷಿ ಬೀಜಗಳನ್ನು ಸಂರಕ್ಷಿಸದೆ ಅವು ಕಣ್ಮರೆಯಾಗಿವೆ. ಇನ್ನು ಮುಂದಿನ ದಿನಗಳಲ್ಲಾದರೂ ಯೋಗ್ಯ ರೀತಿಯಲ್ಲಿ ಕೃಷಿ ಬೀಜಗಳನ್ನು ಸಂರಕ್ಷಿಸಬೇಕಿದೆ ಎಂದರು. ಮನುವಿಕಾಸ ಸಂಸ್ಥೆಯು ಬೆಳೆದು ಬಂದ ಹಾದಿಯ ಬಗೆಗೆ ಮಾತನಾಡಿ ಸಂಸ್ಥೆಯಿಂದ ದೊರೆಯುವ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದಂತಹ ವನಸ್ತ್ರೀ ಸಂಸ್ಥೆಯ ಟ್ರಸ್ಟಿಗಳಾದ ಶ್ರೀಮತಿ ಶ್ಯಾಮಲಾ ಹೆಗಡೆಯವರು ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿ ಬೀಜಗಳ ಸಂರಕ್ಷಣೆ ಮತ್ತು ಬೀಜಗಳ ಬಳಕೆ ಮಹಿಳೆಯರಿಂದಲೇ ಸಾಧ್ಯ. ಒಂದು ಮನೆಗೆ ಕೈತೋಟ ಬಹಳ ಮುಖ್ಯವಾಗಿರುತ್ತದೆ, ಕೈತೋಟದಿಂದ ರಾಸಾಯನಿಕ ಮುಕ್ತ ತರಕಾರಿಗಳನ್ನು ಬೆಳೆಸಬಹುದು, ಇದರಿಂದ ಪೌಷ್ಟಿಕ ಆಹಾರದೊಂದಿಗೆ ಆರೋಗ್ಯ ವೃದ್ಧಿಸುತ್ತದೆ ಎಂದು ಹೇಳಿದರು. ಕೇವಲ ಬೀಜಗಳನ್ನು ಸಂರಕ್ಷಿಸಿ ತಮ್ಮಲ್ಲೇ ಇರಿಸಿಕೊಳ್ಳುವುದಕ್ಕಿಂತ, ಪರಸ್ಪರ ವಿನಿಮಯ ಮಾಡಿಕೊಳ್ಳುವುದು ಉತ್ತಮ, ಹಾಗೆಯೇ ಇದರಿಂದ ವಿವಿಧ ತಳಿಗಳ ಬೀಜಗಳ ಪರಿಚಯವಾಗುತ್ತದೆ. ಸಮಾರಂಭಗಳಲ್ಲಿ ಬಂದ ಅತಿಥಿಗಳಿಗೆ ಉಡುಗೊರೆ ರೂಪವಾಗಿ ನಾವು ಸಂಗ್ರಹಿಸಿದ ಬೀಜಗಳನ್ನು ವಿತರಿಸಿದರೆ ನಮಗೂ ಸಂತೋಷ ಪಡೆದವರೂ ಕೂಡ ಸಂತಸಗೊಳ್ಳುತ್ತಾರೆ ಎಂದು ಬೀಜಗಳ ವಿನಿಮಯದ ಮಹತ್ವವನ್ನು ತಿಳಿಸಿದರು. ಅತಿಥಿಗಳಾಗಿ ಆಗಮಿಸಿದ ವನಸ್ತ್ರೀ ಸಂಸ್ಥೆಯ ಬೀಜ ಸಂರಕ್ಷಕರಾದ ಸಂತೋಷಕುಮಾರ್ ನಾಯಕ್ ಇವರು ಮಾತನಾಡಿ ಬೀಜ ಭಂಡಾರದ ಮಹತ್ವದ ಬಗ್ಗೆ ವಿವರಿಸುತ್ತಾ ಬೀಜ ಭಂಡಾರದ ಉದ್ದೇಶವೇನೆಂದರೆ ಬೀಜ ವಿನಿಮಯ ಪ್ರಕ್ರಿಯೆಗೆ ಪ್ರೋತ್ಸಾಹಿಸಿ, ಬೀಜಗಳನ್ನು ಸಂರಕ್ಷಿಸಿ ರಾಸಾಯನಿಕ ರಹಿತ ತೋಟಗಾರಿಕೆಗೆ ಉತ್ತೇಜಿಸುವುದೇ ಆಗಿದೆ. ಬೀಜಗಳನ್ನು ಒಣಗಿಸುವುದು, ಬೀಜಗಳ ಸಂಗ್ರಹಣಾ ವಿಧಾನ, ಬೀಜಗಳ ಸಂಗ್ರಹಣೆಯಲ್ಲಿ ಪುರಾತನ ಪದ್ಧತಿಯ ಮಹತ್ವ, ವಿಭಿನ್ನ ಬೀಜ ತಳಿಗಳ ಸಂಗ್ರಹಣೆ ಬಗೆಗೆ ಸವಿಸ್ತಾರವಾಗಿ ವಿವರಿಸಿದರು. ಬೀಜಾಮೃತವನ್ನು ತಯಾರಿಸುವ ವಿಧಾನ, ಕೃಷಿಯಲ್ಲಿ ಬೀಜಾಮೃತದ ಮಹತ್ವ ಹಾಗೂ ಅದರ ಬಳಕೆಯ ವಿಧಾನವನ್ನು ತಿಳಿಸಿಕೊಟ್ಟರು. ಉತ್ತಮ ಬೀಜ ಹಾಗೂ ಜೊಳ್ಳು ಬೀಜಗಳನ್ನು ಹೇಗೆ ಕಂಡುಹಿಡಿಯುವದು ಎಂಬುದರ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಈ ತರಬೇತಿಯಲ್ಲಿ ಸುಮಾರು 60ಕ್ಕೂ ಹೆಚ್ಚು ಮಹಿಳೆಯರು ಹಾಗೂ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಹಾಜರಿದ್ದರು.



ಒಳಪುಟಗಳಲ್ಲಿ

* ಮನುವಿಕಾಸ ಸಂಸ್ಥೆಯ ಕಾರ್ಯ ರಾಜ್ಯಕ್ಕೆ ಮಾದರಿ : ಮಾಜಿ ಶಾಸಕ ವಿ.ಎಸ್. ಪಾಟೀಲ್ — ಪುಟ ಸಂಖ್ಯೆ – 5
* ಮನುವಿಕಾಸ ಮತ್ತು ಆಶ್ರಯ ಹಸ್ತ ಟ್ರಸ್ಟ್, ಬೆಂಗಳೂರು ಇವರಿಂದ ಕೆರೆ ಪುನರುಜ್ಜೀವನ ; ಸಮುದಾಯಕ್ಕೆ ಕೆರೆ ಸಮರ್ಪಣೆ — ಪುಟ ಸಂಖ್ಯೆ – 8
* ಮುಂಡಗೋಡ ಪಟ್ಟಣದಲ್ಲಿ ರೈತ ಮಹಿಳೆಯರಿಗೆ ಸುಸ್ಥಿರ ಕೃಷಿ ತರಬೇತಿ ಆಯೋಜನೆ — ಪುಟ ಸಂಖ್ಯೆ – 10



# ಸಂಪಾದಕೀಯ

**ಆತ್ಮೀಯ ಓದುಗರೆ........**

**ಈ** ಬಾರಿಯ ವಾರ್ತಾಪತ್ರವನ್ನು ತಮ್ಮ ಮುಂದಿಡಲು ಅತೀವ ಸಂತಸವೆನಿಸುತ್ತಿದೆ. ಜಲ ಸಂರಕ್ಷಣೆ, ಮಹಿಳಾ ಸಬಲೀಕರಣ, ಪರಿಸರ, ನೆಲ-ಜಲ, ಆರೋಗ್ಯ ಈ ಮೊದಲಾದ ಕ್ಷೇತ್ರಗಳಲ್ಲಿ ಕಳೆದ 21 ವರ್ಷಗಳಿಂದ ಕಾರ್ಯನಿರ್ವಹಿಸುತ್ತಾ ಬಂದಿದ್ದೇವೆ.

2024 ರ ಮೇ ತಿಂಗಳ ಅಂತ್ಯಕ್ಕೆ ಮನುವಿಕಾಸ ಸಂಸ್ಥೆಯು ರೈತರ ಸಹಭಾಗಿತ್ವದಲ್ಲಿ ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ, ಧಾರವಾಡ ಜಿಲ್ಲೆಗಳ ಆಯ್ದ ತಾಲೂಕುಗಳಲ್ಲಿ 281 ಕೆರೆಗಳನ್ನು ಹೂಳೆತ್ತಿ ರೈತಾಪಿ ವರ್ಗಕ್ಕೆ ಚಿಕ್ಕದೊಂದು ಅಳಿಲು ಸೇವೆ ಮಾಡಿರುವ ಸಂತೃಪ್ತಿ ನಮಗಿದೆ. ಹೊಸದಾಗಿ ಹಿರೇಕೆರೂರು, ಹಾವೇರಿ, ಧಾರವಾಡ ಮತ್ತು ಶಿಕಾರಿಪೂರ ತಾಲೂಕುಗಳನ್ನು ಈ ವರ್ಷ ಕೆರೆಗಳ ಪುನರುಜ್ಜೀವನ ಕಾರ್ಯಕ್ಕೆ ಸೇರ್ಪಡೆಗೊಳಿಸಿ ಕೆರೆಗಳನ್ನು ಅಭಿವೃದ್ಧಿಪಡಿಸಿದ್ದೇವೆ. 3500 ಕ್ಕೂ ಅಧಿಕ ಕೃಷಿಹೊಂಡಗಳ ನಿರ್ಮಾಣದಿಂದ ಶಿರಸಿ, ಸಿದ್ದಾಪುರ, ಯಲ್ಲಾಪುರ ಮತ್ತು ಸೊರಬ ಭಾಗಗಳ ರೈತರು ನೆಮ್ಮದಿಯ ನೀರಾವರಿ ಬೇಸಾಯ ಮಾಡಲು ಅನುಕೂಲವಾಗಿದೆ. ಮುಂದಿನ ದಿನಗಳಲ್ಲಿ ಚಿತ್ರದುರ್ಗ, ಬೆಳಗಾವಿ ಹಾಗೂ ದಾವಣಗೆರೆ ಜಿಲ್ಲೆಯ ಆಯ್ದ ತಾಲೂಕುಗಳಿಗೆ ಕೆರೆ ಪುನರುಜ್ಜೀವನ ಯೋಜನೆ ವಿಸ್ತರಿಸುವ ಹಂಬಲ ನಮ್ಮದಾಗಿದೆ.

ಕಳೆದ ಐದಾರು ವರ್ಷಗಳಿಂದ ಈಡೇಲ್‌ಗೀವ್ ಫೌಂಡೇಶನ್ ಜೊತೆಯಲ್ಲಿ ಕಾರ್ಯನಿರ್ವಹಿಸುತ್ತಾ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಪ್ರಾಧ್ಯಾನ್ಯತೆಯನ್ನು ನೀಡಿದ್ದೇವೆ. ಮಹಿಳೆಯರಿಗೆ ಸ್ವ ಸಹಾಯ ಸಂಘಗಳ ರಚನೆಯ ಜೊತೆಯಲ್ಲಿ ಹೊಲಿಗೆ ತರಬೇತಿ, ಬ್ಯೂಟೀಶಿಯನ್ ತರಬೇತಿ, ಅಡುಗೆ ತರಬೇತಿ ಮುಂತಾದವುಗಳನ್ನು ನೀಡುತ್ತಾ ಬಂದಿದ್ದೇವೆ. ಈ ಬಾರಿ ಬೀಜ ಬ್ಯಾಂಕ್, 'ಶ್ರೀ' ಪದ್ಧತಿ ಮೊದಲಾದ ಕೃಷಿ ಸಂಬಂಧಿತ ಯೋಜನೆಯನ್ನು ಅನುಷ್ಠಾನಗೊಳಿಸುವ ಹಾದಿಯಲ್ಲಿ ನಡೆಯುತ್ತಿದ್ದೇವೆ.

ಜಿಲ್ಲೆಯ ಪ್ರಮುಖ ಬುಡಕಟ್ಟು ಜನಾಂಗಗಳಲ್ಲಿ ಒಂದಾದ ಸಿದ್ದಿ ಸಮುದಾಯದ ಅಭಿವೃದ್ಧಿಗಾಗಿ ಹೆಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ ಇವರ ಸಹಕಾರದೊಂದಿಗೆ ಯಲ್ಲಾಪುರ ತಾಲೂಕಿನ ಆಯ್ದ ಸಿದ್ದಿ ಸಮುದಾಯದ ಕುಟುಂಬಗಳಿಗೆ ಆರ್ಥಿಕ ಮಟ್ಟವನ್ನು ಸುಧಾರಿಸಲು ವಿವಿಧ ಯೋಜನೆಯನ್ನು ರೂಪಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದೇವೆ. ಇದೀಗ ನಬಾರ್ಡ ಸಂಸ್ಥೆಯೊಂದಿಗೆ ಜೊತೆಗೂಡಿ ಅಂಕೋಲಾ ತಾಲೂಕಿನ ಡೊಂಗ್ರಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿನ ಆಯ್ದ 150 ಸಿದ್ದಿ ಕುಟುಂಬಗಳ ಜೀವನಮಟ್ಟ ಸುಧಾರಿಸಲು ಕೃಷಿ ಸಂಬಂಧಿತ ಸಲಕರಣೆಗಳು ಹಾಗೂ ತರಬೇತಿಯನ್ನು ನೀಡಲಾಗುತ್ತಿದೆ. ಆ ಕುರಿತಾದ ಮಾಹಿತಿಯು ಸಂಚಿಕೆಯಲ್ಲಿ ಅಡಕವಾಗಿದೆ.

ಸಿ.ಎಮ್.ಎಸ್ ಸಂಸ್ಥೆಯ ಜೊತೆಗೂಡಿ 26 ಕೆರೆಗಳನ್ನು ರೈತರ ಸಹಭಾಗಿತ್ವದಲ್ಲಿ ಹೂಳೆತ್ತಿ ಅಭಿವೃದ್ಧಿಪಡಿಸಿದ್ದು ಅದರ ಮುಂದಿನ ಭಾಗವಾಗಿ ರೈತ ಮಹಿಳೆಯರಿಗೆ ಸುಸ್ಥಿರ ಕೃಷಿ ತರಬೇತಿಯನ್ನು ನೀಡಿ ತರಕಾರಿ ಬೀಜ, ಸಾವಯವ ಗೊಬ್ಬರ ಹಾಗೂ ಜೇನು ಪೆಟ್ಟಿಗೆಯನ್ನು ವಿತರಿಸಲಾಗಿದೆ. ಹೊಲಿಗೆ ಹಾಗೂ ಅಡುಗೆ ತರಬೇತಿಯನ್ನೂ ಸಹ ನೀಡಲಾಗಿದೆ ಆ ಕುರಿತಾದ ಮಾಹಿತಿಯು ಪತ್ರಿಕೆಯಲ್ಲಿ ಲಭ್ಯವಿದೆ.

ಮನುವಿಕಾಸ ಸಂಸ್ಥೆಯು 21 ರ ವಸಂತವನ್ನು ಪೂರೈಸಿ ಮುಂದೆ ಸಾಗುತ್ತಿದೆ, ಸಂಸ್ಥೆಯ ಆರಂಭದ ದಿನದಿಂದ ಇಲ್ಲಿಯವರೆಗೆ ಸಂಸ್ಥೆಯ ಶ್ರೇಯೋಭಿವೃದ್ಧಿಗೆ ಶ್ರಮಿಸಿದ, ಕಷ್ಟದ ಸಮಯದಲ್ಲಿ ನೆರವಾಗಿ ಬೆಂಬಲಸಿದ, ಕಾಲ ಕಾಲಕ್ಕೆ ಉತ್ತಮ ಸಲಹೆ ಸಹಕಾರವನ್ನು ನೀಡಿದ ಆಡಳಿತ ಮಂಡಳಿಯವರಿಗೆ, ಸಲಹಾ ಮಂಡಳಿಯವರಿಗೆ, ಅಧಿಕಾರಿ ವರ್ಗದವರಿಗೆ, ಹಿತೈಷಿಗಳಿಗೆ, ರೈತ ಬಂಧುಗಳಿಗೆ ಹೆಗಲಿಗೆ ಹೆಗಲುಕೊಟ್ಟ ಸಿಬ್ಬಂದಿ ಮಿತ್ರರಿಗೆ ನನ್ನ ಧನ್ಯವಾದವನ್ನು ಅರ್ಪಿಸುತ್ತಿದ್ದೇನೆ. ನಿಮ್ಮ ಸಲಹೆ ಸಹಕಾರ ಮುಂದೆಯೂ ಸಹ ಇದೇ ರೀತಿ ದೊರೆಯಲಿ ಎಂದು ಆಶಿಸುತ್ತೇನೆ.

ವಂದನೆಗಳೊಂದಿಗೆ.

**ಶ್ರೀ ಗಣಪತಿ ಭಟ್ಟ**
ನಿರ್ದೇಶಕರು
ಮನುವಿಕಾಸ ಸಂಸ್ಥೆ ಶಿರಸಿ

# ಮನುವಿಕಾಸ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಶನ್ ವತಿಯಿಂದ ತಿಳವಳ್ಳಿಯಲ್ಲಿ ಬೃಹತ್ ಕೆರೆ ಸಮಾವೇಶ



ಮನುವಿಕಾಸ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಶನ್ ಇವರ ಸಹಯೋಗದೊಂದಿಗೆ ಹಾನಗಲ್ ತಾಲೂಕಿನ ತಿಳವಳ್ಳಿಯ ಹೆಗಡಿಕಟ್ಟಿ ಕಲ್ಯಾಣ ಮಂಟಪದಲ್ಲಿ ದಿನಾಂಕ 30–5–2024 ಗುರುವಾರದಂದು ಬೃಹತ್ ಕೆರೆ ಸಮಾವೇಶವನ್ನು ಆಯೋಜನೆ ಮಾಡಲಾಗಿತ್ತು.

ಕಾರ್ಯಕ್ರಮವನ್ನು ಉದ್ದೇಶಿಸಿ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಪ್ರಾಸ್ತಾವಿಕ ಮಾತನಾಡಿ ನಾನು ನನ್ನ ಬಾಲ್ಯದ ಶಿಕ್ಷಣವನ್ನು ಬಹಳ ಕಷ್ಟದಿಂದ ಕಳೆದಿದ್ದೇನೆ. ಹಳ್ಳಿಗಳಲ್ಲಿ ಉಂಟಾದ ನೀರಿನ ಸಮಸ್ಯೆ, ಮೂಲಭೂತ ಸಮಸ್ಯೆಗಳನ್ನು ಮನಗಂಡು ನಮ್ಮ ಊರಿನ ಸಮಾನ ಮನಸ್ಕರಿಂದ ಮನುವಿಕಾಸ ಎಂಬ ಸ್ವಯಂ ಸೇವಾ ಸಂಸ್ಥೆಯನ್ನು 2003 ರಲ್ಲಿ ಹುಟ್ಟು ಹಾಕಲಾಯಿತು. ಇದು ಯಾವುದೇ ಕಾರ್ಪೊರೇಟ್ ಸಂಸ್ಥೆಯಲ್ಲ ಎಂದು ಹೇಳಿದರು.

ಮನುವಿಕಾಸ ಸಂಸ್ಥೆಯು ಐದು ಜಿಲ್ಲೆಗಳಲ್ಲಿ, 24 ತಾಲೂಕಿನ 1400 ಹಳ್ಳಿಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ ಹಾಗೂ ಧಾರವಾಡ ಜಿಲ್ಲೆಯ ಆಯ್ದ ತಾಲೂಕಿನಲ್ಲಿ 280 ಕೆರೆಗಳನ್ನು ಹೂಳೆತ್ತಿ ಅಭಿವೃದ್ಧಿಪಡಿಸಿದೆ.

ಕನ್ನಡದ ಮೊಟ್ಟಮೊದಲ ರಾಜ ಮನೆತನದವಾದ ಬನವಾಸಿಯ ಕದಂಬರು ತಮ್ಮ ಆಡಳಿತ ಅವಧಿಯಲ್ಲಿ ಕೆರೆಯನ್ನು ನಿರ್ಮಾಣ ಮಾಡಿದ್ದಾರೆ. ಚಕ್ಕಡಿ ಗಾಡಿಗಳಲ್ಲಿ ಕೆರೆಯ ಹೂಳನ್ನು ತೆಗೆದು ಜಮೀನಿಗೆ ಹಾಕುವ ಪರಿಪಾಠ ಹಿಂದಿನ ಕಾಲದಲ್ಲಿ ಇತ್ತು. ಹಾವೇರಿ ಜಿಲ್ಲೆಯಲ್ಲಿಯೇ ಮನುವಿಕಾಸ ಸಂಸ್ಥೆಯು 104 ಕೆರೆಗಳನ್ನು ರೈತರ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಿದೆ. ದೊಡ್ಡ ದೊಡ್ಡ ದಾನಿ ಸಂಸ್ಥೆಗಳ ಸಹಕಾರದಿಂದ ಕೆರೆಗಳ ಪುನರುಜ್ಜೀವನ ಕಾರ್ಯಕ್ರಮವನ್ನು ಸಂಸ್ಥೆಯು ಮಾಡುತ್ತಿದೆ. ಜಗತ್ತಿಗೆ ಅನ್ನ ನೀಡುವ ಮಹಾನ್ ಸ್ವಾಭಿಮಾನಿ ರೈತನಾಗಿದ್ದಾನೆ. ಭೂಮಿ ಮತ್ತು ನೀರನ್ನು ಕಳೆದುಕೊಂಡ ದಿನ ಜಗತ್ತಿನ ಸರ್ವನಾಶದ ದಿನವಾಗುತ್ತದೆ ಎಂದರು.

ಕಾರ್ಯವನ್ನು ಉದ್ಘಾಟಿಸಿ ಹಾವೇರಿ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಶ್ರೀ ರಾಮಣ್ಣ ಕಂಚಳ್ಳಿಯವರು ಮಾತನಾಡಿ ಸರ್ಕಾರ ಮಾಡದಂತಹ ಕೆರೆ ಅಭಿವೃದ್ಧಿ ಕಾರ್ಯಕ್ರಮವನ್ನು ಮನುವಿಕಾಸ ಸಂಸ್ಥೆಯು ಮಾಡಿದೆ, ಇದೊಂದು ಮಾದರಿ ಕಾರ್ಯವಾಗಿದೆ. ನೀರಿಂಗಿಸಲು ಇಂಗುಗುಂಡಿ ನಿರ್ಮಾಣ, ಕೃಷಿ ಹೊಂಡ ನಿರ್ಮಾಣವನ್ನು ಮಾಡುತ್ತಿದೆ. ಕೃಷಿ ಕ್ಷೇತ್ರದಲ್ಲಿ ಬದಲಾವಣೆ ಅನಿವಾರ್ಯವಾಗಿದೆ. ಮನುವಿಕಾಸ ಸಂಸ್ಥೆಯ ಮಹತ್ವಾಕಾಂಕ್ಷೆಯ ಯೋಜನೆಯಾದ ಕೆರೆ ಹೂಳೆತ್ತುವ ಕಾರ್ಯಕ್ರಮಕ್ಕೆ ನಾವೆಲ್ಲರೂ ಕೈ ಜೋಡಿಸಬೇಕು ಎಂದು ರೈತರಿಗೆ ಕರೆ ನೀಡಿದರು.

ಅತಿಥಿಗಳಾಗಿ ಆಗಮಿಸಿದ ಸಾಗರದ ರೈತ ಮುಖಂಡರಾದ ರಾಮಚಂದ್ರ ಮಾತನಾಡಿ ಸ್ವಾರ್ಥವಿಲ್ಲದ ಕೆಲಸವನ್ನು ಮನುವಿಕಾಸದ ನಿರ್ದೇಶಕರಾದ ಗಣಪತಿ ಭಟ್ಟರವರು ಮಾಡುತ್ತಿದ್ದಾರೆ ಎಂದರು.

ಮ.ನಿ.ಪ್ರ. ಶ್ರೀ ಸದಾಶಿವ ಮಹಾಸ್ವಾಮಿಗಳು ಶ್ರೀ ಶಿವಲಿಂಗೇಶ್ವರ ಮಠ, ಹಳ್ಳಿಬೈಲ್ ಇವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಮನುವಿಕಾಸ ಸಂಸ್ಥೆಯ ಕಾರ್ಯವು ಸಮಾಜಕ್ಕೆ ಮಾದರಿಯಾಗಿದೆ. ನಮ್ಮ ಹಳ್ಳಿಬೈಲ್ ಗ್ರಾಮದಲ್ಲಿ ಮೂರು ಕೆರೆಗಳನ್ನು ಸಂಪೂರ್ಣವಾಗಿ ಹೂಳೆತ್ತಿ ಅಭಿವೃದ್ಧಿಪಡಿಸಿದ್ದಾರೆ. ಅನುಮಾನ, ಅಪಮಾನ, ಅಭಿಮಾನದ ನಂತರ ಸನ್ಮಾನ ದೊರೆಯುತ್ತದೆ ಎಂದರು.





ಇದೇ ರೀತಿ ಮುಂದಿನ ಪೀಳಿಗೆಗೆ ತಮ್ಮ ಸಂಸ್ಥೆಯಿಂದ ಅನುಕೂಲ ದೊರೆಯಲಿ ಎಂದು ಆಶೀರ್ವದಿಸಿದರು. ಅತಿಥಿಗಳಾಗಿ ಆಗಮಿಸಿದ ನಿವೃತ್ತ ಉಪನ್ಯಾಸಕರು ಹಾಗೂ ಮನುವಿಕಾಸ ಸಂಸ್ಥೆಯ ಸಲಹಾ ಸಮಿತಿ ಸದಸ್ಯರಾದ ಎಸ್.ಎಂ.ಕಮನಳ್ಳಿ ಮಾತನಾಡಿ ಗಣಪತಿ ಭಟ್ಟರು ನಾನು ಕಾರ್ಯ ನಿರ್ವಹಿಸಿದ ಶಿರಸಿಯ ಎಂ.ಎಂ.ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ವಿದ್ಯಾರ್ಥಿ ಆಗಿದ್ದಂತವರು. ನಮ್ಮ ಹಾವೇರಿ ಜಿಲ್ಲೆಯಲ್ಲಿಯೆ 100 ಕ್ಕೂ ಅಧಿಕ ಕೆರೆ ಹೂಳೆತ್ತಿರುವುದು ಸಂತಸದ ಸಂಗತಿ ಎಂದೆನಿಸಿದೆ. ಇನ್ನೂ ಹೆಚ್ಚಿನ ಕೆರೆ ಪುನರುಜ್ಜೀವನ ಕಾರ್ಯ ನಿರಂತರವಾಗಿ ಸಾಗಲಿ ಎಂದರು.

ರೈತ ಮುಖಂಡರಾದ ಮಲ್ಲಿಕಾರ್ಜುನ ಬಳ್ಳಾರಿ ಮಾತನಾಡಿ ಆತ್ಮಹತ್ಯೆ ಯೋಚನೆ ಬಿಟ್ಟು ಆತ್ಮ ವಿಶ್ವಾಸ ಹೆಚ್ಚಿಸಿಕೊಳ್ಳಿ, ನಿಮ್ಮೊಂದಿಗೆ ನಾವಿದ್ದೇವೆ ಎಂದು ರೈತರಿಗೆ ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಕಿರವಾಡಿ ಗ್ರಾಮದ ಶತಾಯುಷಿಗಳು ಹಾಗೂ ನೂರಾರು ವಿದ್ಯಾರ್ಥಿಗಳಿಗೆ ಸಂಗೀತವನ್ನು ಕಲಿಸಿಕೊಟ್ಟ ಯಲ್ಲಪ್ಪ ಕೋಡಿಹಳ್ಳಿಯವರನ್ನು ಗೌರವಿಸಿ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಶಿವಮೊಗ್ಗ ಜಿಲ್ಲೆಯ ರೈತ ಮುಖಂಡರಾದ ದಿನೇಶ ಶಿರವಾಳ, ಹಾನಗಲ್ ತಾಲೂಕಾ ರೈತ ಸಂಘದ ಅಧ್ಯಕ್ಷರಾದ ಮರಿಗೌಡ ಶಂಕರಗೌಡ ಪಾಟೀಲ್, ತಿಳವಳ್ಳಿಯ ಗ್ರಾ.ಪಂ.ಅಧ್ಯಕ್ಷರಾದ ಶ್ರೀಮತಿ ಅಫ್ರೋಜ್, ರೈತ ಮುಖಂಡರಾದ ಬಸವರಾಜ ಹಾದಿಮನಿ, ಯಲ್ಲಪ್ಪ ಕಲ್ಲೇರ, ಬಸವರಾಜ ಚವ್ಹಾಣ ಹಾಗೂ ಹಾನಗಲ್, ಬ್ಯಾಡಗಿ, ಹಾವೇರಿ ಹಾಗೂ ಸೊರಬ ತಾಲೂಕಿನ 675 ಕ್ಕೂ ಹೆಚ್ಚು ರೈತ ಬಂಧುಗಳು, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



# ಮನುವಿಕಾಸ ಸಂಸ್ಥೆಯ ಕಾರ್ಯ ರಾಜ್ಯಕ್ಕೆ ಮಾದರಿ : ಮಾಜಿ ಶಾಸಕ ವಿ.ಎಸ್. ಪಾಟೀಲ್




ಮನುವಿಕಾಸ ಸಂಸ್ಥೆ ಹಾಗೂ ಹೆಚ್.ಡಿ.ಬಿ.ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್ ಇವರ ಸಹಯೋಗದೊಂದಿಗೆ ಮುಂಡಗೋಡ ತಾಲೂಕಿನ ಎಲ್. ವಿ. ಕೆ. ಸಭಾಭವನದಲ್ಲಿ ದಿನಾಂಕ 25/5/2024 ಶನಿವಾರದಂದು ಕೆರೆ ಸಮಾವೇಶವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ದೇಶಿಸಿ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಇವರು ಪ್ರಾಸ್ತಾವಿಕ ಮಾತನಾಡಿ ಕದಂಬರ ಆಳ್ವಿಕೆ ನಡೆಸಿದ ಗುಡ್ನಾಪುರ ಗ್ರಾಮದ ಕೆರೆ ಅಭಿವೃದ್ಧಿಗೆ ಮುಂದಾಳತ್ವವನ್ನು ಮನುವಿಕಾಸ ವಹಿಸಿತ್ತು. ಕೆರೆ ಅಭಿವೃದ್ಧಿಗೆ ಅನುಮತಿ ಪಡೆಯಲು ವಿವಿಧ ಸರ್ಕಾರಿ ಇಲಾಖೆ, ಶಾಸಕರ ಕಛೇರಿಗೆ ಸತತ ಎರಡು ವರ್ಷಗಳ ಕಾಲ ಅಲೆದಾಡಿ ಅನುಮತಿ ಪಡೆದು ಐತಿಹಾಸಿಕ ಗುಡ್ನಾಪುರ ಕೆರೆಯನ್ನು ಹೂಳೆತ್ತಿ ಪುನರುಜ್ಜೀವನಗೊಳಿಸಿದ್ದೇವೆ. ಸ್ವತಂತ್ರವಾಗಿ ಬದುಕಬಲ್ಲ ವ್ಯಕ್ತಿ ರೈತನಾಗಿದ್ದಾನೆ, ಬೇಸಾಯಕ್ಕೆ ಸಹಕಾರಿಯಾಗುವ ಕೆಲಸವನ್ನು ನಾವು ಮಾಡಬೇಕಾಗಿದೆ. ಉತ್ತರಕನ್ನಡ, ಧಾರವಾಡ, ಹಾವೇರಿ ಹಾಗೂ ಶಿವಮೊಗ್ಗ ಜಿಲ್ಲೆಗಳ ಆಯ್ದ ತಾಲೂಕಿನಲ್ಲಿ ಮನುವಿಕಾಸ ಸಂಸ್ಥೆಯು 280 ಕೆರೆಗಳನ್ನು ಹೂಳೆತ್ತಿ ಪುನರುಜ್ಜೀವನಗೊಳಿಸಿದೆ. ಶಿರಸಿ, ಸಿದ್ದಾಪುರ ಮತ್ತು ಯಲ್ಲಾಪುರ ತಾಲೂಕಿನಲ್ಲಿ 3600 ಕ್ಕೂ ಹೆಚ್ಚು ಕೃಷಿ ಹೊಂಡವನ್ನು ರೈತರ ಸಹಭಾಗಿತ್ವದಲ್ಲಿ ನಿರ್ಮಾಣ ಮಾಡಿದ್ದೇವೆ ಎಂದರು. ಕೆರೆಗೆ ನೀರು ತುಂಬಿಸಲು ಸಾವಿರಾರು ಕೋಟಿ ರೂಪಾಯಿಗಳನ್ನು ಸರ್ಕಾರ ವ್ಯಯಿಸುತ್ತದೆ ಆದರೆ ಕೆರೆಗೆ ಸಮರ್ಪಕ ರೀತಿಯಲ್ಲಿ ನೀರು ಸಂಗ್ರಹವಾಗಲು ಕೆರೆ ಹೂಳೆತ್ತುವ ಕೆಲಸವನ್ನು ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಯಲ್ಲಾಪುರ ಮತ್ತು ಮುಂಡಗೋಡ ಕ್ಷೇತ್ರದ ಮಾಜಿ ಶಾಸಕರಾದ ಶ್ರೀ ವಿ.ಎಸ್. ಪಾಟೀಲ್ ಮಾತನಾಡಿ ನಾನು ಶಾಸಕನಾಗಿದ್ದಾಗ ಕೆರೆ ಹೂಳೆತ್ತಲು 5 ಕೋಟಿ ರೂ ಅನುದಾನ ತಂದು 8 ರಿಂದ 10 ಕೆರೆ ಅಭಿವೃದ್ಧಿಪಡಿಸಿದ್ದೆ, ಆದರೆ ಮನುವಿಕಾಸ ಸಂಸ್ಥೆಯು ಅನುಷ್ಠಾನ ಮಾಡುವ ರೀತಿಯಲ್ಲಿ ಕೆರೆ ಅಭಿವೃದ್ಧಿ ಮಾಡಲು ಸರ್ಕಾರದಿಂದ ಸಾಧ್ಯವಾಗಲಿಲ್ಲ. ಸಂಸ್ಥೆಯು ಕೆರೆ ಹೂಳೆತ್ತಲು ಬಂದಾಗ ರೈತರೆಲ್ಲರೂ ಸಹಕಾರ ನೀಡಬೇಕು ಎಂದು ರೈತರಿಗೆ ಕರೆ ನೀಡಿದರು. ಮನುವಿಕಾಸ ಸಂಸ್ಥೆಯ ನಿಸ್ವಾರ್ಥ ಸೇವೆಯ ಕಾರ್ಯ ಶ್ಲಾಘನೀಯ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಧಾರವಾಡದ ವಾಲ್ಮಿ (**Water and Land Management Institute**) ಸಂಸ್ಥೆಯ ನಿರ್ದೇಶಕರಾದ ಡಾ. ರಾಜೇಂದ್ರ ಪೊದ್ದಾರ್ ಮಾತನಾಡಿ ನೀರಾವರಿ ಕ್ಷೇತ್ರಕ್ಕೆ ತೆರಿಗೆ ಹಣದಿಂದ ಸಾವಿರಾರು ಕೋಟಿ ರೂ ವಿನಿಯೋಗ ಮಾಡಿದೆ, ಆದರೂ ಸಹ ಕೃಷಿಯಲ್ಲಿ ರೈತ ಕಷ್ಟದಲ್ಲಿ ಇದ್ದಾನೆ. ನೆಲ, ಜಲ, ಕೃಷಿಯ ಕುರಿತು ಜಾಗೃತರಾಗಬೇಕಿದೆ. ಮಳೆ ಸುರಿವ ಪ್ರಮಾಣ ಕಡಿಮೆಯಾಗಿಲ್ಲ,

MANUVIKASA




ವಿಧಾನ ಬದಲಾಗಿದೆ; ಇದು ಬೇಸಾಯದ ಬದುಕಿನ ಮೇಲೆ ಪರಿಣಾಮ ಬೀರುತ್ತದೆ ಎಂದರು. ಕೆರೆ ಮತ್ತು ನದಿಗಳ ಮಲಿನ ತಡೆಗಟ್ಟುವ ಕುರಿತು ನಮ್ಮ ಮಕ್ಕಳಿಗೆ ತಿಳುವಳಿಕೆ ನೀಡುವ ಅಗತ್ಯತೆ ಇದೆ. ನೆಲ – ಜಲ ಸಂರಕ್ಷಣೆ ನಮ್ಮೆಲ್ಲರ ಹೊಣೆ, ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಎದುರಾಗುವುದು, ಹಾಗಾಗಿ ನೀರನ್ನು ಸಂರಕ್ಷಿಸಿ ಹಿತ ಮಿತವಾಗಿ ಬಳಸಿ ಎಂದರು.

ಸಾಗರ ತಾಲೂಕಿನ ರೈತ ಮುಖಂಡರಾದ ಶ್ರೀ ದಿನೇಶ ಶಿರವಾಳ ಮಾತನಾಡಿ ಕೆರೆಗಳ ಮೂಲ ಸ್ವರೂಪವನ್ನೇ ಬದಲಿಸಿ ಮಲಿನ ಮಾಡುತ್ತಿರುವುದು ಜನರೇ ಆಗಿದ್ದಾರೆ. ನಾವೆಲ್ಲರೂ ಕೆರೆಗಳನ್ನು ಜೋಪಾನ ಮಾಡುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕಿದೆ. ಮನುವಿಕಾಸ ಸಂಸ್ಥೆಯು ಜೀವ, ಜಲಚರಗಳಿಗೆ ಒಳಿತಾಗುವ ಕಾರ್ಯವನ್ನು ಮಾಡುತ್ತಿದೆ. ರಾಜ್ಯದ ಎಲ್ಲಾ ತಾಲೂಕಿಗೂ ನಿಮ್ಮ ಸೇವೆ ಲಭ್ಯವಾಗಲಿ ಎಂದು ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಮಾಜ ಸೇವಕರಾದ ಶ್ರೀ ಎಲ್.ಟಿ. ಪಾಟೀಲ್ ಮಾತನಾಡಿ ಮನುವಿಕಾಸ ಸಂಸ್ಥೆಯ ನಿರ್ದೇಶಕ ಗಣಪತಿ ಭಟ್ಟರು ರೈತರಿಗೆ ಆಪತ್ಬಾಂಧವರಾಗಿದ್ದಾರೆ. ಸರ್ಕಾರ ಅನುಷ್ಠಾನ ಮಾಡದ ಕೆಲಸವನ್ನು ಮನುವಿಕಾಸ ಸಂಸ್ಥೆಯು ಮಾಡುತ್ತಿದೆ ಎಂದರು.

ಈ ಕಾರ್ಯಕ್ರಮದಲ್ಲಿ ವಾಲ್ಮಿ ಸಂಸ್ಥೆಯ ಅಧಿಕಾರಿಗಳಾದ ಸುರೇಶ ಕುಲಕರ್ಣಿ, ಪ್ರಗತಿಪರ ರೈತರಾದ ನಾಗರಾಜ ಬೆಣ್ಣಿ, ಸಮಾಜ ಸೇವಕರಾದ ಜ್ಞಾನೇಶ್ವರ ಗುಡಿಹಾಳ ಹಾಗೂ ರೈತ ಮುಖಂಡರಾದ ಪರಶುರಾಮ ಪೂಜಾರ, ಬಸವರಾಜ ಕರ್ಲಟ್ಟಿ, ಕಲ್ಲಪ್ಪ ಹುಲ್ಲಂಬಿ ಹಾಗೂ ಮುಂಡಗೋಡ, ಕಲಘಟಗಿ ಹಾಗೂ ಶಿಗ್ಗಾಂವ್ ತಾಲೂಕಿನ ರೈತರು, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



# ‘ಆರಿ’ ನಾರಿಯರ ಸ್ವ ಉದ್ಯೋಗಕ್ಕೆ ದಾರಿ



ಮಹಿಳೆಯರಲ್ಲಿ ಸ್ವ ಉದ್ಯೋಗದ ಮನೋಭಾವನೆಯನ್ನು ಬೆಳೆಸಿ ಅವರನ್ನು ಸ್ವ ಉದ್ಯೋಗಿಗಳನ್ನಾಗಿ ಮಾಡುವುದು ಮನುವಿಕಾಸ ಸಂಸ್ಥೆಯ ಆಶಯ. ಇದರ ಭಾಗವಾಗಿ ಮನುವಿಕಾಸ ಸಂಸ್ಥೆಯು ಈಗಾಗಲೇ ಮಹಿಳೆಯರಿಗಾಗಿ ಕಾಲಕ್ಕೆ ತಕ್ಕಂತೆ ಅನೇಕ ಕೌಶಲ್ಯ ತರಬೇತಿಗಳನ್ನು ನಡೆಸುತ್ತಾ ಬಂದಿದೆ. ಕೌಶಲ್ಯ ತರಬೇತಿಯನ್ನು ಕಡಿಮೆ ದರದಲ್ಲಿ ಆಸಕ್ತ ಮಹಿಳೆಯರಿಗೆ ನೀಡುತ್ತಿದೆ.ಅವುಗಳಲ್ಲಿ ಹೊಲಿಗೆ ತರಬೇತಿಯೂ ಒಂದು. ಈಗಾಗಲೇ ಸುಮಾರು ಒಂದು ಸಾವಿರಕ್ಕೂ ಅಧಿಕ ಮಹಿಳೆಯರು ಹೊಲಿಗೆ ತರಬೇತಿಯ ಲಾಭವವನ್ನು ಪಡೆದಿದ್ದಾರೆ. ಅವುಗಳಲ್ಲಿ ಸುಮಾರು 70% ರಷ್ಟು ಮಹಿಳೆಯರು ಸ್ವ ಉದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ ಎನ್ನಬಹುದು. ಕೇವಲ ತರಬೇತಿಯನ್ನು ನೀಡಿ ಕೈ ಬಿಡದೆ ನಿಯಮಿತವಾಗಿ ಅವರೊಂದಿಗೆ ಸಂಪರ್ಕದಲ್ಲಿದ್ದು, ಅವರು ತರಬೇತಿಯಿಂದ ಪ್ರಯೋಜನವನ್ನು ಪಡೆಯುತ್ತಿದ್ದಾರೆಯೇ ಎಂಬುದನ್ನು ಪರೀಕ್ಷಿಸಲು ಪುನರಾವಲೋಕನಾ ಸಭೆಯನ್ನು, ಹಾಗೆಯೇ ಮನೆ ಭೇಟಿಯನ್ನು ಏರ್ಪಡಿಸಲಾಗುತ್ತದೆ. ತರಬೇತಿಯನ್ನು ಕೇವಲ ಮನರಂಜನೆಗೆ ಪಡೆಯದೆ ಆರ್ಥಿಕವಾಗಿ ಸಬಲರಾಗಲು ಬಳಸುವಂತಾಗಬೇಕೆಂಬುದು ಸಂಸ್ಥೆಯ ಉದ್ದೇಶ. ಹಾಗಾಗಿಯೇ ತರಬೇತಿ ನೀಡುವ ಮೊದಲು ಅಭ್ಯರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುತ್ತದೆ.

ಈಗಿನ ಫ್ಯಾಶನ್ ಜಮಾನದಲ್ಲಿ ವಿವಿಧ ರೀತಿಯ ವಿನ್ಯಾಸಿ ಉಡುಗೆಗಳನ್ನೇ ಎಲ್ಲರೂ ಇಷ್ಟಪಡುತ್ತಾರೆ ಮತ್ತು ಪ್ರಾಶಸ್ತ್ಯ ನೀಡುತ್ತಾರೆ ಎನ್ನಬಹುದು. ಹಾಗಾಗಿ ಅಡ್ವಾನ್ಸಡ ಹೊಲಿಗೆ ತರಬೇತಿಗೆ ಎಲ್ಲ ಕಡೆಯಿಂದ ಮಹಿಳೆಯರು ಬೇಡಿಕೆ ಇಟ್ಟಿದ್ದರಿಂದ ಹಳಿಯಾಳ ತಾಲೂಕಿನಲ್ಲಿ 30 ದಿನದ ಅಡ್ವಾನ್ಸಡ ಹೊಲಿಗೆ ತರಬೇತಿಯನ್ನು ಏರ್ಪಡಿಸಿ "ಆರಿ ವರ್ಕ್" ತರಬೇತಿಯನ್ನು 30 ಜನ ಮಹಿಳೆಯರಿಗೆ ನೀಡಿದ್ದೇವೆ.

ತರಬೇತಿಯಲ್ಲಿ ತರಗತಿಗೆ ಬೇಕಾದ ವಿವಿಧ ರೀತಿಯ ಮಣಿಗಳು, ಬಟ್ಟೆ, ಸೂಜಿ, ವಿವಿಧ ರೀತಿಯ ದಾರಗಳು ಇವುಗಳನ್ನು ಸಂಸ್ಥೆಯ ಕಡೆಯಿಂದ ಒದಗಿಸಿದ್ದೇವೆ. ತರಬೇತಿ ಪಡೆದ ಮಹಿಳೆಯರು ಇದನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಮನುವಿಕಾಸವು ಕೇವಲ ತರಬೇತಿಗಳನ್ನು ನೀಡದೇ ಉದ್ಯೋಗ ಮನೋಭಾವನೆಯನ್ನು ಮೂಡಿಸುವಲ್ಲಿ ಕಾರ್ಯಪ್ರವೃತ್ತವಾಗಿದೆ.

"ಮನುವಿಕಾಸ ಸಂಸ್ಥೆಯು ಅಡ್ವಾನ್ಸಡ ಹೊಲಿಗೆ ತರಬೇತಿಯನ್ನು ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಿ ಕಡಿಮೆ ದರದಲ್ಲಿ ನೀಡಿದೆ. ಮನೆಯಲ್ಲಿಯೇ ಕೂತು ಉದ್ಯೋಗವನ್ನು ಮಾಡುವಂತಾಗಿದೆ. ಇದರಿಂದ ಅನೇಕ ಮಹಿಳೆಯರ ಸ್ವ ಉದ್ಯೋಗದ ಬಯಕೆಯು ಪೂರ್ಣಗೊಂಡಿದೆ" ಎಂದು ತರಬೇತಿಯ ಫಲಾನುಭವಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.





# ಮನುವಿಕಾಸ ಮತ್ತು ಆಶ್ರಯ ಹಸ್ತ ಟ್ರಸ್ಟ್, ಬೆಂಗಳೂರು ಇವರಿಂದ ಕೆರೆ ಪುನರುಜ್ಜೀವನ; ಸಮುದಾಯಕ್ಕೆ ಕೆರೆ ಸಮರ್ಪಣೆ

ಮನುವಿಕಾಸ ಸಂಸ್ಥೆ ಮತ್ತು ಆಶ್ರಯ ಹಸ್ತ ಟ್ರಸ್ಟ್, ಬೆಂಗಳೂರು ಇವರ ಸಹಯೋಗದಲ್ಲಿ ದಿನಾಂಕ 09/02/2024 ಶುಕ್ರವಾರದಂದು ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಶಾಡಗುಪ್ಪಿ ಪಂಚಾಯತಿಯ ಕೊಂಡೋಜಿ ಗ್ರಾಮದಲ್ಲಿ ಅಭಿವೃದ್ಧಿಪಡಿಸಿದ ನೇರಳಕಟ್ಟೆ ಕೆರೆಯನ್ನು ಗ್ರಾಮಪಂಚಾಯತಿಗೆ ಹಸ್ತಾಂತರಿಸುವ "ಕೆರೆ ಸಮರ್ಪಣಾ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ರೈತರನ್ನು ಉದ್ದೇಶಿಸಿ ಮಾತನಾಡಿ, ಮನುವಿಕಾಸ ಸಂಸ್ಥೆಯು ರೈತರಿಗೆ ಅನುಕೂಲವಾಗಲು ಜಲಸಂರಕ್ಷಣೆಗೆ ಸಂಬಂಧಿಸಿದಂತೆ ಕೆರೆ ಪುನರುಜ್ಜೀವನ ಕಾರ್ಯಕ್ರಮವನ್ನು ನಡೆಸುತ್ತ ಬಂದಿದೆ. ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ ಹಾಗೂ ಧಾರವಾಡ ಜಿಲ್ಲೆಗಳಲ್ಲಿ 280 ಕೆರೆಗಳನ್ನು ರೈತರ ಸಹಭಾಗಿತ್ವದೊಂದಿಗೆ ಹೂಳೆತ್ತಿ ಅಭಿವೃದ್ಧಿಪಡಿಸಿದೆ. 3393 ಕ್ಕೂ ಅಧಿಕ ಕೃಷಿಹೊಂಡಗಳನ್ನು ರೈತರಿಗೆ ನಿರ್ಮಿಸಿ ಕೊಟ್ಟಿದೆ. ನಗರೀಕರಣ, ಅತಿಯಾದ ರಾಸಾಯನಿಕ ಗೊಬ್ಬರಗಳ ಬಳಕೆ, ನೀರಿನ ಅತಿಯಾದ ಬಳಕೆ ಇನ್ನಿತರ ಕಾರಣಗಳಿಂದ ವಾತಾವರಣ ಬಹಳಷ್ಟು ಬದಲಾವಣೆಗೆ ಒಳಪಟ್ಟಿದೆ. ಬೇಸಿಗೆಯಲ್ಲೂ ಅಕಾಲಿಕ ಮಳೆ ಉಂಟಾಗುವುದು, ಮಳೆಗಾಲದಲ್ಲಿ ಉತ್ತಮ ಮಳೆ ಆಗದಿರುವುದು ಕೃಷಿ ಚಟುವಟಿಕೆಯ ಮೇಲೆ ನೇರ ಪರಿಣಾಮವನ್ನು ಬೀರುತ್ತದೆ. ಕೆರೆ ಕಟ್ಟೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿಯ ಕುರಿತಾಗಿ ಸರ್ಕಾರವು ವಿಶೇಷ ಕಾಳಜಿಯನ್ನು ವಹಿಸಬೇಕಿದೆ ಎಂದು ಒತ್ತಾಯಿಸಿದರು. ಕೆರೆಗಳನ್ನು ಹೂಳೆತ್ತಿದ ನಂತರ ಯೋಗ್ಯ ರೀತಿಯಲ್ಲಿ ಕಾಪಾಡಿಕೊಂಡು, ಅಭಿವೃದ್ಧಿಪಡಿಸಿಕೊಂಡು ಹೋಗುವ ಜವಾಬ್ದಾರಿ ಪ್ರತಿಯೊಬ್ಬ ಗ್ರಾಮಸ್ಥರದ್ದು ಆಗಿರುತ್ತದೆ ಎಂದು ಸಲಹೆಯನ್ನು ನೀಡಿದರು.



ಯೋಜನೆಯು ಯಶಸ್ವಿಯಾಗಬೇಕಾದರೆ ಸ್ಥಳೀಯರ ಒಗ್ಗಟ್ಟು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದರು. ಪ್ರಸ್ತುತ ಸಂಪೂರ್ಣವಾಗಿ ಹೂಳೆತ್ತಲಾಗಿರುವ ನೇರಳಕಟ್ಟೆ ಕೆರೆಯು 4 ಎಕರೆ 25 ಗುಂಟೆ, ವಿಸ್ತೀರ್ಣವನ್ನು ಹೊಂದಿದ್ದು ಈ ಕೆರೆಯಿಂದ 18800 ಕ್ಯೂಬಿಕ್ ಮೀಟರ್‌ನಷ್ಟು ಹೂಳನ್ನು ರೈತರ ಸಹಭಾಗಿತ್ವದಿಂದ ತೆಗೆಯಲಾಗಿದ್ದು 87 ಕ್ಕೂ ಹೆಚ್ಚು ಬಡ ಕುಟುಂಬಗಳು ಇದರ ಲಾಭ ಪಡೆದಿವೆ. ಕೆರೆಯ ಸುಸ್ಥಿರತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕೆರೆ ಸಮಿತಿಯನ್ನು ರಚಿಸಲಾಗಿದೆ. ಕೆರೆಯ ಅಚ್ಚುಕಟ್ಟು ಪ್ರದೇಶಗಳ ಸುಮಾರು 320 ಎಕರೆಗೂ ಹೆಚ್ಚು ಪ್ರದೇಶಕ್ಕೆ ಇದರ ಪ್ರಯೋಜನ ಸಿಗಲಿದೆ ಎಂದರು.









ಆಶ್ರಯ ಹಸ್ತ ಟ್ರಸ್ಟ್, ಬೆಂಗಳೂರು ಇದರ ಸಿನಿಯರ್ ಪೋರ್ಟ್ ಪೋಲಿಯೊ ಮ್ಯಾನೇಜರ್ ಶ್ರೀ ಹರ್ಷ ರಾಮ ಅವರು ಮಾತನಾಡಿ, ಶ್ರೀಯುತ ಕೆ. ದಿನೇಶ್ ರವರು ಆಶ್ರಯ ಹಸ್ತ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಹಾಗೂ ಇನ್ಫೋಸಿಸ್ ಸಂಸ್ಥೆಯ ಸಹ ಸಂಸ್ಥಾಪಕರು ಸಹ ಆಗಿದ್ದು ಶಿಕ್ಷಣ, ಆರೋಗ್ಯ, ಪರಿಸರ ಸಂರಕ್ಷಣೆ, ಪ್ರಕೃತಿ ವಿಕೋಪ ಮುಂತಾದ ಸಾಮಾಜಿಕ ಕಾರ್ಯಗಳಿಗೆ ಸಂಸ್ಥೆಯು ಆರ್ಥಿಕ ನೆರವನ್ನು ನೀಡುತ್ತಿದೆ. ಮನುವಿಕಾಸದಿಂದ ಒಳ್ಳೆಯ ಕೆಲಸ ಆಗಿದೆ. ಮುಂದಿನ ದಿನಗಳಲ್ಲಿ ಕೆರೆಗೆ ಹೂಳು ಬಾರದೆ ಇರುವ ಹಾಗೆ ರೈತರು ಕ್ರಮ ಕೈಗೊಳ್ಳಬೇಕು. ಕೆಲ ವಿಜ್ಞಾನಿಗಳ ವರದಿಯ ಪ್ರಕಾರ 2050ನೇ  ಇಸವಿಯಲ್ಲಿ 50 ಕ್ಕಿಂತ ಹೆಚ್ಚಿನ ರಾಷ್ಟ್ರಗಳಲ್ಲಿ ಕುಡಿಯಲು ನೀರು ಸಿಗುವುದಿಲ್ಲ. ಅದಕ್ಕಾಗಿ ಗಿಡ ನೆಡುವುದು ಮತ್ತು ಅವುಗಳ ಆರೈಕೆ ಮಾಡುವುದು ಪಕ್ಷಿಗಳಿಗೆ ಅಗತ್ಯ ಇರುವ ಗಿಡಗಳನ್ನು ನೆಡಬೇಕು. ರೈತರಿಂದ ಪರಿಸರ ಉಳಿಸುವ ಕಾರ್ಯ ಆಗಬೇಕು. ಅವರು ಮನುವಿಕಾಸದಿಂದ ಪುನರುಜ್ಜೀವನಗೊಳಿಸಲಾದ ನೇರಳಕಟ್ಟೆ ಕೆರೆಯನ್ನು ವೀಕ್ಷಿಸಿ ಮನುವಿಕಾಸ ಸಂಸ್ಥೆ ಮತ್ತು ರೈತರನ್ನು ಅಭಿನಂದಿಸಿದರು.

ಹಾನಗಲ್ ತಾಲೂಕಿನ ರೈತ ಸಂಘದ ಅಧ್ಯಕ್ಷರಾದ ಶ್ರೀ ಮರಿಗೌಡ ಶಂಕರಗೌಡ ಪಾಟೀಲ್ ಮಾತನಾಡಿ ಮನವಿಕಾಸ ಸಂಸ್ಥೆಯು ರೈತರ ಸಹಭಾಗಿತ್ವದೊಂದಿಗೆ ಕೆರೆಯನ್ನು ಪುನರುಜ್ಜೀವನಗೊಳಿಸುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿ, ಮುಂಬರುವ ದಿನದಲ್ಲಿ ಸಂಸ್ಥೆಯು ತಾಲೂಕಿನ ಇನ್ನಷ್ಟು ಕೆರೆಗಳನ್ನು ಪುನರುಜ್ಜೀವನಗೊಳಿಸಲಿ ಎಂದರು. ಶಾಡಗುಪ್ಪಿ ಗ್ರಾಮ ಪಂಚಾಯತ್‌ನ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ಗುತ್ಯಪ್ಪ ಕಣ್ಣಪ್ಪನವರ್ ಮಾತನಾಡಿ ಸರಕಾರದ ಜೊತೆ ಜೊತೆಗೆ ಸ್ವಯಂಸೇವಾ ಸಂಸ್ಥೆಗಳೂ ಸಹ ಸಮುದಾಯ ಮಟ್ಟದಲ್ಲಿ ಅಭಿವೃದ್ಧಿಗೆ ಕೈಜೋಡಿಸಿದರೆ ಸಮಾಜದ ಅಭಿವೃದ್ಧಿ ಸಾಧ್ಯ ಎಂದರು. ಕೊಂಡೋಜಿ ಕೆರೆ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಸತೀಶ್ ಅಂಕೋಲಾರವರು ಮಾತನಾಡಿ ಮುಂಬರುವ ದಿನಗಳಲ್ಲಿ ನೇರಳಕಟ್ಟೆ ಕೆರೆಯ ಸಮಗ್ರ ಅಭಿವೃದ್ಧಿಯತ್ತ ಸಮಿತಿಯು ಗಮನ ಇರಿಸುತ್ತದೆ ಹಾಗೂ ಮುಂದಿನ ಪೀಳಿಗೆಗೆ ಕೆರೆಯನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿಯನ್ನು ಹೊರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಹಾನಗಲ್ ತಾಲೂಕಿನ ರೈತ ಸಂಘದ ಉಪಾಧ್ಯಕ್ಷರಾದ ಶ್ರೀ ಮಹೇಶ್ ವೀರಪ್ಪನವರ್, ಕಾರ್ಯದರ್ಶಿಗಳಾದ ರುದ್ರಪ್ಪ ಅಣ್ಣಿ, ಶಾಡಗುಪ್ಪಿ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರಾದ ಶ್ರೀಮತಿ ಶಿವಲೀಲಾ ಗುಡ್ಡೆದ, ಸದಸ್ಯರುಗಳಾದ ಶ್ರೀಮತಿ ಕಳಸಮ್ಮ ಶಿವಪ್ಪ ಗೌರಕ್ಕನವರ್, ಶ್ರೀಮತಿ ಶೈಲಜಾ ನಾರನವರ್, ಶ್ರೀ ಕೊಟ್ರಪ್ಪ ಕುದುರೆ ಸಿದ್ದಣ್ಣನವರ್, ಶ್ರೀ ರಾಮಣ್ಣ ಬುಡ್ಡಣ್ಣವರ್, ಶ್ರೀ ಪ್ರಶಾಂತ್ ಪಾಟೀಲ್ ಶಾಡಗುಪ್ಪಿ  ಸೇರಿದಂತೆ ರೈತ ಸಂಘದ ಸರ್ವ ಸದಸ್ಯರು, ರೈತ ಭಾಂದವರು ಹಾಗೂ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಮುಂಡಗೋಡ ಪಟ್ಟಣದಲ್ಲಿ ರೈತ ಮಹಿಳೆಯರಿಗೆ ಸುಸ್ಥಿರ ಕೃಷಿ ತರಬೇತಿ ಆಯೋಜನೆ




ಮನುವಿಕಾಸ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಹಯೋಗದೊಂದಿಗೆ ಮುಂಡಗೋಡ ಪಟ್ಟಣದ ಪಂಜುರ್ಲಿ ಹೊಟೆಲ್‌ನಲ್ಲಿ ದಿನಾಂಕ 15–5–2024 ಮಂಗಳವಾರದಂದು ರೈತ ಮಹಿಳೆಯರಿಗಾಗಿ ಒಂದು ದಿನದ ಸುಸ್ಥಿರ ಕೃಷಿ ತರಬೇತಿ ಕಾರ್ಯವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಗತಿಪರ ರೈತರಾದ ನಾಗರಾಜ ಬೆಣ್ಣೆ ಮಾತನಾಡಿ ಮಿಶ್ರ ಬೆಳೆ ಪದ್ಧತಿಯಿಂದ ರೈತರು ಲಾಭವನ್ನು ಪಡೆಯಬಹುದು. ಬೆಲೆ ಕುಸಿತ, ಹವಾಮಾನ ವೈಪರೀತ್ಯದಿಂದ ಏಕ ಬೆಳೆಯನ್ನು ಬೆಳೆದರೆ ನಷ್ಟ ಉಂಟಾಗುವ ಸಂಭವ ಹೆಚ್ಚು. ಜೇನು ಸಾಕಾಣಿಕೆ, ಕೋಳಿ ಸಾಕಾಣಿಕೆ, ಹೈನುಗಾರಿಕೆ ಜೊತೆಗೆ ತರಕಾರಿ, ಭತ್ತ, ಅಡಿಕೆ, ಜೋಳ ಹೀಗೆ ವಿವಿಧ ಬೆಳೆಯನ್ನು ಬೆಳೆಯುತ್ತಿದ್ದೇನೆ. ಅಡಿಕೆ ಬೆಳೆಯ ನಡುವೆ ಅರಿಶಿಣ ಬೆಳೆಯನ್ನು ಬೆಳೆದಿದ್ದೇನೆ, ಸೆಣಬಿನ ಬೆಳೆಯಿಂದ ಉತ್ತಮ ಸಾವಯವ ಅಂಶ ಜಮೀನಿಗೆ ದೊರೆಯುತ್ತದೆ. ಅಡಿಕೆ ಹಾಳೆಯಿಂದ ವಿವಿಧ ಗಾತ್ರದ ಪ್ಲೇಟ್‌ಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದೇನೆ ಎಂದು ತಮ್ಮ ಕೃಷಿ ಅನುಭವ ಹಂಚಿಕೊಂಡರು. ಮನುವಿಕಾಸ ಸಂಸ್ಥೆಯು ಮುಂಡಗೋಡ ತಾಲೂಕಿಗೆ ಸಾಕಷ್ಟು ಕೆರೆ ಹೂಳೆತ್ತಿ ಅಭಿವೃದ್ಧಿಪಡಿಸಿ ಕೆರೆಗಳಲ್ಲಿ ಸಮೃದ್ಧವಾಗಿ ನೀರು ನಿಲ್ಲುವಂತೆ ಮಾಡಿ ಕೃಷಿಕರಿಗೆ ಅನುಕೂಲ ಮಾಡಿಕೊಟ್ಟಿದೆ ಎಂದರು.

ಅತಿಥಿಗಳಾಗಿ ಆಗಮಿಸಿದ ಮುಂಡಗೋಡ ತಾಲೂಕಿನ ಕೃಷಿ ಇಲಾಖೆಯು ಸಹಾಯಕ ನಿರ್ದೇಶಕರಾದ ಶ್ರೀ ಎಂ.ಎಸ್.ಕುಲಕರ್ಣಿಯವರು ಮಾತನಾಡಿ ಕೃಷಿ ಕುರಿತಾದ ಹೆಚ್ಚಿನ ಜಾಗೃತಿ ಮೂಡಿಸಲು ವಿವಿಧ ಭಾಗಗಳಲ್ಲಿ ರೈತರ ಜಮೀನಿಗೆ ಪ್ರವಾಸವನ್ನು ಕಾಲ ಕಾಲಕ್ಕೆ ಆಯೋಜನೆ ಮಾಡುತ್ತಿದ್ದೇವೆ. ಮೌಲ್ಯ ವರ್ಧಿತ ವಸ್ತುಗಳ ತಯಾರಿಕೆಗೆ ಇಲಾಖೆಯಿಂದ ಸಬ್ಸಿಡಿಯಲ್ಲಿ ಯಂತ್ರವನ್ನು ವಿತರಿಸುತ್ತಿದ್ದೇವೆ ಎಂದು ಇಲಾಖೆಯಿಂದ ದೊರೆಯುವ ಸವಲತ್ತುಗಳ ಬಗ್ಗೆ ತಿಳಿಸಿದರು.

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ತಾಲೂಕಿನ ಕೃಷಿ ಅಧಿಕಾರಿಗಳಾದ ರಮೇಶ್ ಜಮಖಂಡಿ ಮಾತನಾಡಿ ರಾಸಾಯನಿಕ ಆಹಾರದಿಂದ ದೂರ ಉಳಿಯಲು ಮನೆಯಲ್ಲಿಯೇ ತರಕಾರಿಗಳನ್ನು ಬೆಳೆದು ಉತ್ತಮ ಆರೋಗ್ಯ ಕಾಪಾಡಿಕೊಳ್ಳಿ ಎಂದು ಕಿವಿ ಮಾತನ್ನು ಹೇಳಿದರು.

ಮುಂಡಗೋಡ ಕೃಷಿ ಇಲಾಖೆಯ ಬ್ಲಾಕ್ ಟೆಕ್ನಿಕಲ್ ಮ್ಯಾನೇಜರ್ ಆದ ದೀಪಾ ಶೆಟ್ಟರ್ ಮಾತನಾಡಿ ಉತ್ತಮ ಸುಸ್ಥಿರ ಕೃಷಿ ಮಾಡಲು ಉತ್ತಮ ಸಾವಯವ ಗೊಬ್ಬರ, ಸುಧಾರಿತ ಬೀಜಗಳು, ಕಳೆ ನಿರ್ವಹಣೆ ಮಾಡುವುದು ಮುಖ್ಯವಾಗಿದೆ. ಆಕರ್ಷಕ ಬಲೆ, ಸಾವಯವ ಅಂಶಗಳ






ಮೂಲಕ ಸರಳ ರೀತಿಯಲ್ಲಿ ಕೀಟ ನಿರ್ವಹಣೆ ಮಾಡಬಹುದಾಗಿದೆ. ವರ್ಷವಿಡೀ ಒಂದರ ನಂತರ ಒಂದರಂತೆ ಬೆಳೆ ಕಟಾವು ಮಾಡಿ ಆದಾಯ ಬರುವಂತಹ ಬೆಳೆಯನ್ನು ಬೆಳೆಯಬೇಕು. ಇದರ ಜೊತೆಯಲ್ಲಿ ಅರಣ್ಯ ಕೃಷಿ, ಜೇನು ಸಾಕಾಣಿಕೆಯಿಂದ ಪರಾಗಸ್ಪರ್ಶದ ಮೂಲಕ ಇಳುವರಿ ಹೆಚ್ಚಳಕ್ಕೂ ಕೂಡ ಸಹಾಯಕವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕರಗಿನಕೊಪ್ಪ, ಇಂದೂರ್, ನೆಲ್ಲಹರವಿ, ಗರುಡ ಹೊನ್ನಳ್ಳಿ ಗ್ರಾಮಗಳಿಂದ ಆಗಮಿಸಿದ ರೈತ ಮಹಿಳೆಯರು ಮತ್ತು ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ಸಂಸ್ಥೆಯ ಸಿಬ್ಬಂದಿಯಾದ ಬಸವರಾಜ ರಡ್ಡೇರ್ ಪ್ರಾಸ್ತಾವಿಕ ಮಾತನಾಡಿದರು, ಗಣಪತಿ ಯಲಿವಾಳ ಕಾರ್ಯಕ್ರಮ ನಿರೂಪಿಸಿದರು.

# ಮನುವಿಕಾಸ ಸಂಸ್ಥೆಯಿಂದ ಮಹಿಳೆಯರಿಗೆ ಪರ್ಯಾಯ ಜೀವನೋಪಾಯ ನಿರ್ವಹಣಾ ಅಭಿವೃದ್ಧಿಗಾಗಿ ಸುಸ್ಥಿರ ಕೃಷಿ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿಗಳ ಆಯೋಜನೆ











ಮನುವಿಕಾಸ ಸಂಸ್ಥೆಯು ಕಳೆದ ಎರಡು ದಶಕಗಳಿಂದ ರೈತರಿಗಾಗಿ ಸದಾ ನಾವೀನ್ಯತೆಯುಳ್ಳ ಪ್ರಗತಿಪರ ಕಾರ್ಯಚಟುವಟಿಕೆಗಳನ್ನು ರೂಪಿಸಿ ಅದನ್ನು ಸಕ್ರಿಯವಾಗಿ ಅನುಷ್ಠಾನಗೊಳಿಸುತ್ತಿದೆ. ಗ್ರಾಮೀಣ ಸಮುದಾಯದ ಮಟ್ಟದಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಉಪಯೋಗ ಮತ್ತು ಜಾಗೃತಿಯನ್ನು ನಿರಂತರವಾಗಿ ಮೂಡಿಸುತ್ತಿದೆ.

ಮನುವಿಕಾಸ ಸಂಸ್ಥೆಯು ಸಿಎಮ್‌ಎಸ್ ಇನ್ಫೋ ಸಿಸ್ಟಮ್ಸ್ ಲಿಮಿಟೆಡ್, ಮುಂಬೈ ಇವರ ಸಹಯೋಗದೊಂದಿಗೆ ಈಗಾಗಲೇ ಉತ್ತರಕನ್ನಡ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಅವಸಾನದ ಅಂಚಿನಲ್ಲಿರುವ 26 ಮಧ್ಯಮ ಮತ್ತು ಬೃಹತ್ ಗಾತ್ರದ ಕೆರೆಗಳನ್ನು ಪುನರುಜ್ಜೀವನಗೊಳಿಸಿದೆ.

ಯೋಜನೆಯ ಮುಂದುವರೆದ ಭಾಗವಾಗಿ 2023–24ನೇ ಸಾಲಿನಲ್ಲಿ ಸಿಎವ್‌ಎಸ್ ಫೌಂಡೇಶನ್‌ನ ಸಹಯೋಗದೊಂದಿಗೆ ಉತ್ತರ ಕನ್ನಡ ಜಿಲ್ಲೆಯ ಆಯ್ದ ಗ್ರಾಮಗಳ ಸುಮಾರು **255** ಮಹಿಳೆಯರಿಗೆ ಸುಸ್ಥಿರ ಕೃಷಿ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿಯನ್ನು ಅಭಿವೃದ್ಧಿಪಡಿಸಿ ಅವರಲ್ಲಿ ಪರ್ಯಾಯ ಜೀವನೋಪಾಯ ನಿರ್ವಹಣೆ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಮೂಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.

## ಸುಸ್ಥಿರ ಕೃಷಿ ತರಬೇತಿ ಮತ್ತು ಅಧ್ಯಯನ ಪ್ರವಾಸ ಆಯೋಜನೆ ಮತ್ತು ಕೃಷಿ ಪೂರಕ ಅಗತ್ಯ ಪರಿಕರಗಳ ವಿತರಣೆ

ಶಿರಸಿ ತಾಲೂಕಿನ ಬೀಳೂರು, ಮರಗುಂಡಿ ಕುಪ್ಪಗಡ್ಡೆ ಮತ್ತು ಸಂತೊಳ್ಳಿ ಗ್ರಾಮಗಳ ಆಯ್ದ 103 ಮಹಿಳೆಯರಿಗೆ ಸುಸ್ಥಿರ ಕೃಷಿಯ ಪರಿಕಲ್ಪನೆಯನ್ನು ಮೂಡಿಸಲು ಮತ್ತು ಅವರ ಕುಟುಂಬಗಳ ಆರ್ಥಿಕ ಜೀವನಮಟ್ಟವನ್ನು ಸುಧಾರಿಸಲು **"ಸುಸ್ಥಿರ ಕೃಷಿ ತರಬೇತಿ ಹಾಗೂ ಅಧ್ಯಯನ ಪ್ರವಾಸವನ್ನು"** ಈಗಾಗಲೇ ಸಂಸ್ಥೆಯು ಆಯೋಜಿಸಿದೆ. ಸುಸ್ಥಿರ ಕೃಷಿಯನ್ನು ಉತ್ತೇಜಿಸಲು ಸಾವಯವ ಗೊಬ್ಬರ, ಹುಳ ಸಹಿತ ಜೇನು ಪೆಟ್ಟಿಗೆ ಮತ್ತು ವಿವಿಧ ರೀತಿಯ ಕೃಷಿ ಬೀಜಗಳು, ಮತ್ತು ಉಪ ಆದಾಯವನ್ನು ನೀಡುವಂತಹ ಮಾವು, ಗೇರು, ಲವಂಗ, ಹಲಸು, ದಾಲ್ಚಿನಿ ಮತ್ತು ಮುರುಗಲು ಮೊದಲಾದ ಗಿಡಗಳನ್ನು ಆಯ್ದ **103** ಮಹಿಳೆಯರಿಗೆ ವಿತರಿಸಿದೆ.

## ಕೌಶಲ್ಯಾಭಿವೃದ್ಧಿ ಮತ್ತು ಆರ್ಥಿಕ ಸುಸ್ಥಿರತೆಗಾಗಿ ಹೊಲಿಗೆ ಮತ್ತು ಕೇಟರಿಂಗ್ ತರಬೇತಿಯ ಆಯೋಜನೆ

ಸಂಸ್ಥೆಯು ಶಿರಸಿ ತಾಲೂಕಿನ ಯಡಯೂರಬೈಲು, ಕುಪ್ಪಗಡ್ಡೆ ಮತ್ತು ಸಂತೊಳ್ಳಿ ಗ್ರಾಮಗಳ ಆಯ್ದ ಆಸಕ್ತ **75** ಗ್ರಾಮೀಣ ಮಹಿಳೆಯರಿಗೆ **60** ದಿನಗಳ ಹೊಲಿಗೆ ತರಬೇತಿಯನ್ನು ಆಯೋಜಿಸಿದೆ. ಶಿರಸಿ ತಾಲೂಕಿನ ಬೀಳೂರು, ಮರಗುಂಡಿ, ಕೋಟೆಕೊಪ್ಪ ಮತ್ತು ತಿಗಣಿ ಗ್ರಾಮಗಳ ಆಸಕ್ತ **80** ಗ್ರಾಮೀಣ ಮಹಿಳೆಯರಿಗೆ 5 ದಿನಗಳ ಕೇಟರಿಂಗ್ ತರಬೇತಿಯನ್ನು ಸಹ ಆಯೋಜಿಸಿದೆ.

ತರಬೇತಿಯನ್ನು ಪಡೆದ ಗ್ರಾಮೀಣ ಪ್ರದೇಶದ ಮಹಿಳೆಯರು ಆರ್ಥಿಕವಾಗಿ ಸಬಲರಾಗಿ ಅವರಿಗೆ ಉದ್ಯಮಶೀಲತಾ ಗುಣಗಳನ್ನು ಅಭಿವೃದ್ಧಿಪಡಿಸಲು ಇದು ಸಹಾಯಕವಾಗಲಿದೆ.

ಯೋಜನೆಯು ಸಮರ್ಪಕ ಅನುಷ್ಠಾನ ಮತ್ತು ಪಾರದರ್ಶಕತೆಯನ್ನು ವೀಕ್ಷಿಸಲು ಮತ್ತು ಫಲಾನುಭವಿಗಳ ಅಭಿಪ್ರಾಯನ್ನು ಸಂಗ್ರಹಿಸಲು ಸಿಎಮ್‌ಎಸ್ ಸಂಸ್ಥೆಯ ಪ್ರತಿನಿಧಿಗಳು ದಿನಾಂಕ 19–20 ಜೂನ್ 2024 ರಂದು ಮನುವಿಕಾಸ ಸಂಸ್ಥೆಗೆ ಭೇಟಿ ನೀಡಿದ್ದು, ಯೋಜನೆಯ ಬಗೆಗೆ ಸಂಪೂರ್ಣವಾದ ಮಾಹಿತಿಯನ್ನು ಪಡೆದು ಸಂಸ್ಥೆಯ ಕಾರ್ಯಸಾಧನೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.











# ಮನುವಿಕಾಸ ಸಂಸ್ಥೆಯಿಂದ ಡೊಂಗ್ರಿ ಗ್ರಾಮದಲ್ಲಿ ವಿಶ್ವ ಪರಿಸರ ದಿನಾಚರಣೆ ಆಯೋಜನೆ




ಮನುವಿಕಾಸ ಸಂಸ್ಥೆ ಹಾಗೂ ನಬಾರ್ಡ್ ಬೆಂಗಳೂರು ಇವರ ಸಹಯೋಗದಲ್ಲಿ ಜೂನ್ 5, ಬುಧವಾರದಂದು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಡೊಂಗ್ರಿ ಗ್ರಾಮ ಪಂಚಾಯತಿಯ ಡೊಂಗ್ರಿ ಗ್ರಾಮದಲ್ಲಿ ವಿಶ್ವ ಪರಿಸರ ದಿನಾಚರಣೆ ಹಾಗೂ ಸ್ವ ಸಹಾಯ ಸಂಘದ ಮಹಿಳೆಯರಿಗೆ ನಾಯಕತ್ವದ ಮತ್ತು ಪರಿಕಲ್ಪನಾ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ವಲಯ ಅರಣ್ಯ ಅಧಿಕಾರಿಗಳಾದ ಗುರುನಾಥ್ ಎಮ್, ಡೊಂಗ್ರಿ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ವಿನೋದ್ ಭಟ್ಟ, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಪವನ್ ಬೊಮ್ಮನಹಳ್ಳಿ, ಮಹೇಶ್ ನಾಯ್ಕ ಸೇರಿದಂತೆ ಊರ ಗ್ರಾಮಸ್ಥರೊಂದಿಗೆ  ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಗಿಡ ನೆಡುವುದರ ಮೂಲಕ ಸಾಂಕೇತಿಕವಾಗಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸ್ವ ಸಹಾಯ ಸಂಘದ ಮಹಿಳೆಯರಿಗೆ ತರಬೇತಿಯನ್ನು ಆಯೋಜಿಸಿದ್ದು ಡೊಂಗ್ರಿ ಗ್ರಾಮ ಪಂಚಾಯತದ ಅಧ್ಯಕ್ಷರಾದ ಶ್ರೀ ವಿನೋದ್ ಭಟ್ಟ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ನಮ್ಮ ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಮನುವಿಕಾಸ ಎಂಬ ಹೆಸರಾಂತ ಸಂಸ್ಥೆಯೊಂದು ಕಾಲಿಟ್ಟು ಇಲ್ಲಿನ ಬಡ ಕುಟುಂಬಗಳ ಅಭಿವೃದ್ಧಿಗೆ ಯೋಜನೆಯನ್ನು ರೂಪಿಸಿದ್ದು ಗ್ರಾಮಸ್ಥರಲ್ಲಿ ಹರ್ಷವನ್ನುಂಟು ಮಾಡಿದೆ. ಕೇವಲ ಸರ್ಕಾರದಿಂದ ಮಾತ್ರ ಅಭಿವೃದ್ಧಿ ಸಾಧ್ಯವಿಲ್ಲ, ಈ ರೀತಿಯ ಸಂಘ ಸಂಸ್ಥೆಗಳು ಜನರ ಆರ್ಥಿಕ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸುವುದರ ಮೂಲಕ ಹಾಗೂ ಜನ ಸಾಮಾನ್ಯರು ಅದರ ಒಳ್ಳೆಯ ಪ್ರಯೋಜನಗಳನ್ನು ಪಡೆಯುವುದರಿಂದ ಯೋಜನೆಯು ಯಶಸ್ವಿಯಾಗುತ್ತದೆ ಎಂದು ತಿಳಿಸಿ ಮನುವಿಕಾಸ ಸಂಸ್ಥೆಗೆ ಧನ್ಯವಾದವನ್ನು ತಿಳಿಸಿದರು.

ಕಾರ್ಯಕ್ರಮದ ಕುರಿತು ಮನುವಿಕಾಸ ಸಂಸ್ಥೆಯ ಸಿಬ್ಬಂದಿ ಪವನ್ ಬೊಮ್ಮನಹಳ್ಳಿಯವರು ಪ್ರಾಸ್ತಾವಿಕ ಮಾತನಾಡಿ ಕಳೆದ 23 ವರ್ಷಗಳ ಹಿಂದೆ ಸಿದ್ದಾಪುರ ತಾಲೂಕಿನ ಕರ್ಜಗಿ ಎಂಬಲ್ಲಿ ಪ್ರಾರಂಭವಾದ ಸಂಸ್ಥೆ ಇಂದು ರಾಜ್ಯಾದ್ಯಂತ ಒಟ್ಟು ಐದು ಜಿಲ್ಲೆಗಳಲ್ಲಿ ಮಹಿಳಾ ಸಬಲೀಕರಣ, ಪರಿಸರ ಅಭಿವೃದ್ಧಿ, ಕೆರೆಗಳ ಪುನರುಜ್ಜೀವನ, ಮಹಿಳೆಯರಿಗೆ ಕೌಶಲ್ಯ ತರಬೇತಿ ಹಾಗೂ ಬುಡಕಟ್ಟು ಸಮುದಾಯಗಳ

ಅಭಿವೃದ್ಧಿಯ ಕಾರ್ಯ ಯೋಜನೆಗಳನ್ನು ನಡೆಸುತ್ತಿದೆ. ಈ ಸಂಸ್ಥೆಯು ಇದೀಗ ಅಂಕೋಲಾ ತಾಲೂಕಿನ ಡೊಂಗ್ರಿ ಗ್ರಾಮ ಪಂಚಾಯಿತಿಯಲ್ಲಿ ಸುಮಾರು 150 ಕುಟುಂಬಗಳನ್ನು ಆಯ್ಕೆ ಮಾಡಿಕೊಂಡು ಅವರ ಅಭಿವೃದ್ಧಿಗೆ ಜೇನು ಸಾಕಾಣಿಕೆ, ಕೋಳಿ ಸಾಕಾಣಿಕೆ, ಎರೆಹುಳು ಗೊಬ್ಬರ ತೊಟ್ಟಿ ನಿರ್ಮಾಣ, ಆರೋಗ್ಯ ಮತ್ತು ನೈರ್ಮಲ್ಯ ತರಬೇತಿ ಹೀಗೆ ಅನೇಕ ರೀತಿಯ ಕಾರ್ಯಕ್ರಮಗಳನ್ನು ನಬಾರ್ಡ್ ಸಂಸ್ಥೆಯ ನೆರವಿನೊಂದಿಗೆ ರೂಪಿಸಿದೆ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಶ್ರೀಮತಿ ಗೀತಾ ಪಂಡಿತ್ ಇವರು ಸ್ವ ಸಹಾಯ ಸಂಘದ ಪರಿಕಲ್ಪನೆ, ಸಂಘದ ಸದಸ್ಯರಲ್ಲಿ ನಾಯಕತ್ವದ ಗುಣ, ಸಂಘಗಳ ನಿರ್ವಹಣೆ ಕುರಿತಾಗಿ ತರಬೇತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಡೊಂಗ್ರಿ ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರಾದ ಮಂಜು ಸಿದ್ದಿ, ಹಾಲಿ ಸದಸ್ಯರಾದ ರೇಣುಕಾ ಸಿದ್ದಿ, ಸಿದ್ದಿಸಿರಿ ಗ್ರಾಮೀಣ ಜೀವನೋಪಾಯ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಭವಾನಿ ಸಿದ್ದಿ ಹಾಜರಿದ್ದರು. ಕಾರ್ಯಕ್ರಮವನ್ನು ಮನುವಿಕಾಸ ಸಂಸ್ಥೆಯ ಸಿಬ್ಬಂದಿಯಾದ ಗಣಪತಿ ಸಿದ್ದಿಯವರು ಆಯೋಜಿಸಿದ್ದರು, ಕುಮಾರಿ ಗೀತಾ ನೀಲೇಕಣಿ ಮತ್ತು ಕುಮಾರಿ ಪ್ರಭಾವತಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.





ಮನುವಿಕಾಸ ಸಂಸ್ಥೆಯು ಸಿದ್ದಿ ಸಮುದಾಯದ ಅಭಿವೃದ್ಧಿಗಾಗಿ ಯಲ್ಲಾಪುರದಲ್ಲಿ ಹೆಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ್ ಇವರ ಸಹಯೋಗದಲ್ಲಿ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ.

ಇದೀಗ ಮನುವಿಕಾಸ ಸಂಸ್ಥೆ ಹಾಗೂ ನಬಾರ್ಡ್ ಬೆಂಗಳೂರು ಇವರ ಸಹಯೋಗದಲ್ಲಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಡೊಂಗ್ರಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಆಯ್ದ 150 ಸಿದ್ದಿ ಕುಟುಂಬಗಳಿಗೆ ನಾನ್‌ವಾಡಿ ಪ್ರಾಜೆಕ್ಟ್ **(Tribal Development Project)** ಎಂಬ ಯೋಜನೆ ಅಡಿಯಲ್ಲಿ ಹೊಸ ಕಾರ್ಯ ಯೋಜನೆಯನ್ನು ರೂಪಿಸಿದೆ.

ಇದರ ಭಾಗವಾಗಿ ಆಯ್ದ 150 ಸಿದ್ದಿ ಕುಟುಂಬಗಳಿಗೆ 15 ಸ್ವ ಸಹಾಯ ಸಂಘಗಳನ್ನು ರಚಿಸಿ ಅವರನ್ನು ಒಗ್ಗೂಡಿಸಿ ನಾಯಕತ್ವ ಮತ್ತು ಸ್ವ ಸಹಾಯ ಸಂಘದ ಪರಿಕಲ್ಪನಾ ತರಬೇತಿಯನ್ನು ನೀಡಲಾಗುತ್ತದೆ. ಜೇನು ಸಾಕಾಣಿಕೆಗೆ ಉತ್ತೇಜನ ನೀಡುವ ದೃಷ್ಟಿಯಿಂದ ಸಿದ್ದಿ ಸಮುದಾಯದವರಿಗೆ ಜೇನು ಸಾಕಾಣಿಕಾ ತರಬೇತಿಯನ್ನು ನೀಡಿ ಜೇನು ಪೆಟ್ಟಿಗೆಗಳನ್ನು ವಿತರಿಸಲಾಗುತ್ತದೆ. ಆದಾಯ ವೃದ್ಧಿಗಾಗಿ ಕೋಳಿ ಸಾಕಾಣಿಕಾ ತರಬೇತಿಯನ್ನು ನೀಡಿ ಕೋಳಿ ಮತ್ತು ಶೆಡ್‌ಗಳ ವಿತರಣೆ ಮಾಡಲಾಗುತ್ತದೆ. ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉತ್ತೇಜನ ನೀಡುವ ದೃಷ್ಟಿಯಿಂದ ಎರೆಹುಳು ಗೊಬ್ಬರ ತಯಾರಿಕೆಗೆ ಎರೆಹುಳು ತೊಟ್ಟಿಗಳ ನಿರ್ಮಾಣಕ್ಕೆ ಪ್ರೋತ್ಸಾಹಿಸಲಾಗುತ್ತಿದೆ. ಇದರ ಜೊತೆಯಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿ ಕೊಡುವುದು ಯೋಜನೆಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ.

ಆರೋಗ್ಯ ಮತ್ತು ನೈರ್ಮಲ್ಯ ಶಿಬಿರವನ್ನು ಏರ್ಪಡಿಸುವುದು, ವಿದ್ಯುತ್ ಸಂಪರ್ಕ ಇಲ್ಲದ ಆಯ್ದ ಮನೆಗಳಿಗೆ ಸೋಲಾರ್ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿ ಕೊಡುವಂತಹ ಉದ್ದೇಶದೊಂದಿಗೆ ಮನುವಿಕಾಸ ಸಂಸ್ಥೆಯು ನಬಾರ್ಡ್ ಸಂಸ್ಥೆಯೊಂದಿಗೆ ಕೈ ಜೋಡಿಸಿ ಯೋಜನೆಯ ಅನುಷ್ಠಾನಕ್ಕೆ ಮುಂದಾಗಿದೆ.



# ಮತ್ಸ್ಯಸಿರಿ ರೈತ ಉತ್ಪಾದಕ ಸಂಘಕ್ಕೆ ಉದ್ಯಮಶೀಲತಾ ತರಬೇತಿ ಆಯೋಜನೆ

ಮನುವಿಕಾಸ ಸಂಸ್ಥೆ ಮತ್ತು ಎಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ ಇವರ ಸಹಯೋಗದಲ್ಲಿ ದಿನಾಂಕ 29/06/2024 ಶನಿವಾರದಂದು ಮರವಂತೆ ಗ್ರಾಮ ಪಂಚಾಯತ್ ಸಭಾಭವನದಲ್ಲಿ BUSINESS PLANNING PREPARATION AND EXECUTION ಎಂಬ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ತರಬೇತಿಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಮೂಕಾಂಬಿಕಾ ರೈತ ಉತ್ಪಾದಕ ಕಂಪನಿಯ ವ್ಯವಸ್ಥಾಪಕ ಕಾರ್ಯನಿರ್ವಹಣಾ ಅಧಿಕಾರಿಗಳಾದ ಶ್ರೀ ಅನಿಲ್ ಮೂಕಾಂಬಿಕಾ ಅವರು ಮತ್ಸ್ಯಸಿರಿ ಮಹಿಳಾ ಮೀನು ಉತ್ಪಾದಕರ ಮತ್ತು ಮತ್ಸ್ಯೋದ್ಯಮ ಸಂಘದ ಅಧ್ಯಕ್ಷರು ಪದಾಧಿಕಾರಿಗಳ ಪರಿಚಯವನ್ನು ಮಾಡಿಕೊಂಡು ಷೇರುದಾರರ ಜೊತೆ ಶೇರು ಸಂಗ್ರಹಣೆ ಕುರಿತು ಚರ್ಚೆ ಮಾಡಿ ರೈತ ಉತ್ಪಾದಕ ಸಂಸ್ಥೆಯ ಅನುಕೂಲಗಳ ಬಗ್ಗೆ ಹಾಗೂ ಅದರಿಂದ ಷೇರು ಸದಸ್ಯರಿಗೆ ಆಗುವ ಲಾಭಗಳು ಹಾಗೂ ರೈತ ಉತ್ಪಾದಕ ಸಂಸ್ಥೆಗೆ ಬೇರೆ ಬೇರೆ ಸಂಘ ಸಂಸ್ಥೆಗಳಿಂದ ಸಿಗುವ ನೆರವುಗಳ ಕುರಿತು ಮಾಹಿತಿ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಉಡುಪಿ ಜಿಲ್ಲೆಯ ಪ್ರಧಾನಮಂತ್ರಿ ಮೈಕ್ರೋ ಫುಡ್ ಪ್ರೊಸೆಸಿಂಗ್ ಎಂಟರ್‌ಪ್ರೈಸಸ್ ಯೋಜನೆಯ (PMFME) ಅಧಿಕಾರಿಗಳಾದ ಶ್ರೀ ಸೂರಜ್ ಶೆಟ್ಟಿಯವರು ಮಾತನಾಡಿ ಕೇಂದ್ರ ಸರ್ಕಾರದ ಆತ್ಮ ನಿರ್ಭರ ಭಾರತ ಅಭಿಯಾನದ ಭಾಗವಾಗಿ ಈ ಯೋಜನೆಯನ್ನು ಆರಂಭಿಸಲಾಗಿದೆ. ಅಸಂಘಟಿತ ವಲಯದಲ್ಲಿರುವ ಸೂಕ್ಷ್ಮ, ಸಣ್ಣ ಆಹಾರ ಸಂಸ್ಕರಣಾ ಉದ್ದಿಮೆಗಳನ್ನು ಪ್ರೋತ್ಸಾಹಿಸಿ ಅವುಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದರ ಜೊತೆಯಲ್ಲಿ ಸ್ವ ಸಹಾಯ ಸಂಘಗಳು ಮತ್ತು ರೈತ ಉತ್ಪಾದಕ ಸಂಘಗಳಿಗೆ ಉತ್ತೇಜನ ನೀಡುವುದು ಯೋಜನೆಯ ಮೂಲ ಉದ್ದೇಶವಾಗಿದೆ ಎಂದರು. ಯೋಜನೆಯಿಂದ ದೊರೆಯುವ ಅನುಕೂಲಗಳ ಬಗ್ಗೆ ಪರಿಚಯ ಮಾಡಿಕೊಟ್ಟರು. ತರಬೇತಿಯಲ್ಲಿ ಮತ್ಸ್ಯಸಿರಿ ರೈತ ಉತ್ಪಾದಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಷೇರು ಸದಸ್ಯರು ಮತ್ತು ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾಗ ಮಿಥುನ್ ನಾಯ್ಕ್, ಗಣಪತಿ ಗಾಮದ, ಸಂಪನ್ಮೂಲ ವ್ಯಕ್ತಿಗಳಾದ ಚಂದ್ರಾವತಿಯವರು ಹಾಜರಿದ್ದರು.









# ಮನುವಿಕಾಸದ ಜನಪರ ಕಾಳಜಿಗೆ ಶಾಸಕ ಶಿವರಾಮ್ ಹೆಬ್ಬಾರ್ ಶ್ಲಾಘನೆ




ಮನುವಿಕಾಸ ಸಂಸ್ಥೆ, ಶಿರಸಿ ಹಾಗೂ ಹೆಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ ಇವರ ಸಹಯೋಗದಲ್ಲಿ ದಿನಾಂಕ 13/07/2024 ಶನಿವಾರದಂದು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಮಂಚಿಕೇರಿ ಗ್ರಾಮದಲ್ಲಿ ಸಿದ್ದಿ ಸಮುದಾಯದ ಕುಟುಂಬಗಳಿಗೆ ತೋಟಗಾರಿಕೆ ಮತ್ತು ಬೇರು ಆಧಾರಿತ ಕೃಷಿಗೆ ಅನುಕೂಲವಾಗುವಂತಹ ಪರಿಕರಗಳ ವಿತರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಯಲ್ಲಾಪುರ ಮತ್ತು ಮುಂಡಗೋಡ ವಿಧಾನಸಭಾ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಶಿವರಾಮ್ ಹೆಬ್ಬಾರ್ ಅವರು ಆಗಮಿಸಿದ್ದರು. ಈ ಸಂದರ್ಭದಲ್ಲಿ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಮತ್ತು ಸಿದ್ದಿಸಿರಿ ಮಹಿಳಾ ರೈತ ಉತ್ಪಾದಕ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸುಜಾತಾ ಸಿದ್ದಿಯವರು ಹಾಜರಿದ್ದರು.

ಕಾರ್ಯಕ್ರಮದ ಕುರಿತು ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಪ್ರಾಸ್ತಾವಿಕವಾಗಿ ಮಾತನಾಡಿ, ಸಿದ್ದಿ ಸಮುದಾಯದ ಕುಟುಂಬದವರು ಅನೇಕ ರೀತಿಯ ಯೋಜನೆಗಳನ್ನು ಪಡೆದರೂ ಸಹ ಮುನ್ನೆಲೆಗೆ ಬರುವಲ್ಲಿ ಇನ್ನೂ ಹೆಚ್ಚಿನ ಪ್ರಯತ್ನ ಪಡಬೇಕಿದೆ. ಅವರದೇ ಆದ ಸ್ವಂತ ಉದ್ಯಮಗಳನ್ನು ಸ್ಥಾಪಿಸುವಲ್ಲಿ ಇನ್ನೂ ಹೆಚ್ಚಿನ ಶ್ರಮ ವಹಿಸಬೇಕಿದೆ. ಸಂಸ್ಥೆಯೂ ಸಹ ಈ ನಿಟ್ಟಿನಲ್ಲಿ ಕೆಲಸ ಮಾಡುವ ಉದ್ದೇಶವನ್ನು ಹೊಂದಿದ್ದು ಈಗಾಗಲೇ ಅನೇಕ ಕುಟುಂಬಗಳಿಗೆ ಸ್ವ ಉದ್ಯೋಗದ ಪರಿಕರಗಳು, ಜೇನು ಕೃಷಿಗೆ ಉತ್ತೇಜನ ಹಾಗೂ ಕೃಷಿಯಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆದು ಹೆಚ್ಚಿನ ಆದಾಯ ಪಡೆಯುವಂತಾಗಲಿ ಎಂಬ ಆಶಯದಿಂದ ಜೇನು ಪೆಟ್ಟಿಗೆಗಳು ಮತ್ತು ತೋಟಗಾರಿಕಾ ಪರಿಕರಗಳ ವಿತರಣೆಯನ್ನು ಕಳೆದ ಎರಡು ವರ್ಷಗಳಿಂದ ಮಾಡುತ್ತಾ ಬಂದಿದೆ. ಸಂಸ್ಥೆಯಿಂದ ದೊರಕುವ ಈ ಪರಿಕರಗಳ ಜೊತೆಗೆ ತಾವೂ ಸಹ ಹೆಚ್ಚಿನ ಶ್ರಮವಹಿಸಿ ಮುನ್ನಲೆಗೆ ಬನ್ನಿ ಎಂದು ಶುಭ ಹಾರೈಸಿದರು.

ಮಹಿಳೆಯರಿಗೆ ಕೃಷಿ ಸಲಕರಣೆಗಳನ್ನು ವಿತರಿಸಿ ಶಾಸಕರಾದ ಸನ್ಮಾನ್ಯ ಶ್ರೀ ಶಿವರಾಮ್ ಹೆಬ್ಬಾರ್ ಮಾತನಾಡಿ, ಮನುವಿಕಾಸ ಸಂಸ್ಥೆಯು ಮುಂಡಗೋಡ ಮತ್ತು ಯಲ್ಲಾಪುರ ಕ್ಷೇತ್ರದಲ್ಲಿ ಈಗಾಗಲೇ ರೈತರಿಗೆ ಅನುಕೂಲವಾಗುವಂತಹ ನೂರಾರು ಕೆರೆಗಳನ್ನು ಅಭಿವೃದ್ಧಿಗೊಳಿಸಿ ರೈತರ ಕೃಷಿಗೆ ಬೆನ್ನೆಲುಬಾಗಿ ನಿಂತಿದೆ. ಇದೀಗ ಸಿದ್ದಿ ಸಮಾಜದ ಕುಟುಂಬಗಳಿಗೂ ಸಹ ಈ ರೀತಿಯ ಪರಿಕರಗಳನ್ನು ವಿತರಿಸುವ ಮೂಲಕ ಕೃಷಿಗೆ ನೆರವಾಗುತ್ತಿದೆ. ಇದರ ಲಾಭವನ್ನು ತಾವುಗಳೆಲ್ಲ ಪಡೆದು ಸಂಸ್ಥೆ ಮಾಡುತ್ತಿರುವ ಈ ಕಾರ್ಯಕ್ಕೆ ಸಹಕಾರ ನೀಡಬೇಕು, ವಿತರಿಸಿದ ಸಲಕರಣೆಗಳನ್ನು ದುರುಪಯೋಗಪಡಿಸಿಕೊಳ್ಳದೆ ಕೃಷಿಗೆ ಬಳಸಿಕೊಂಡು ಅಭಿವೃದ್ಧಿ ಹೊಂದಿರಿ ಎಂದು ತಿಳಿಸಿದರು.

ಸುಮಾರು 24 ಫಲಾನುಭವಿಗಳಿಗೆ ಬೇಲಿಗೆ ಬಳಸುವ ಮುಳ್ಳುತಂತಿ, ಡ್ರಿಪ್ ಮತ್ತಿತರ ಕೃಷಿ ಪರಿಕರಗಳನ್ನು ವಿತರಿಸಲಾಯಿತು ಈ ಸಂದರ್ಭದಲ್ಲಿ ಮಂಚಿಕೇರಿ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ವಿನೋದ ಪೂಜಾರಿ ಸೇರಿದಂತೆ ಸುಮಾರು 30ಕ್ಕೂ ಹೆಚ್ಚು ಸಿದ್ದಿ ಸಮುದಾಯದ ಕುಟುಂಬದವರು ಹಾಜರಿದ್ದರು. ಮನುವಿಕಾಸ ಸಂಸ್ಥೆ ಸಿಬ್ಬಂದಿಗಳಾದ ಕಿರಣ್ ಗೌಡ ಅವರು ಕಾರ್ಯಕ್ರಮವನ್ನು ಆಯೋಜಿಸಿದರು, ಪವನ್ ಬೊಮ್ಮನಹಳ್ಳಿ ನಿರೂಪಿಸಿದರು, ಕುಮಾರಿ ಜಯಶ್ರೀ ಶಾಸ್ತ್ರಿ ಅವರು ವಂದಿಸಿದರು.






## ಮನುವಿಕಾಸ ಸಂಸ್ಥೆಯ ವತಿಯಿಂದ 2023-24ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲಾದ ಕೆರೆಗಳ ಮಾಹಿತಿ

| ಕ್ರ.ಸಂ | ಕೆರೆಯ ಹೆಸರು | ಊರು | ಸರ್ವೆ ನಂ | ಎಕರೆ | ಪಂಚಾಯತ | ತಾಲೂಕ | ಜಿಲ್ಲೆ | ಜಿಪಿಎಸ್ |
|---|---|---|---|---|---|---|---|---|
| 1 | ಮುತ್ತಲಕಟ್ಟಿಕೆರೆ | ಸೂಡಂಬಿ | 16 | 16.09.00 | ಸೂಡಂಬಿ | ಬ್ಯಾಡಗಿ | ಹಾವೇರಿ | 14.60842578<br>75.30116891 |
| 2 | ಗೌಡಿಕಟ್ಟಿಕೆರೆ | ಇನಾಂನೆರಲಗಿ | 19 | 06.24.00 | ಸಮ್ಮಸಗಿ | ಹಾನಗಲ್ | ಹಾವೇರಿ | 14.67637833<br>75.0439450 |
| 3 | ಹಿರೇಕೆರೆ | ಶ್ಯಾಡಗುಪ್ಪಿ | 85 | 17.07.00 | ಶ್ಯಾಡಗುಪ್ಪಿ | ಹಾನಗಲ್ | ಹಾವೇರಿ | 14.67799833<br>75.18986333 |
| 4 | ಜಗಳಿಕಟ್ಟ ಕೆರೆ | ಹಿರೇಅಣಜಿ | 02 | 11.35.00 | ಹಿರೇಅಣಜಿ | ಬ್ಯಾಡಗಿ | ಹಾವೇರಿ | 14.61496047<br>75.33140934 |
| 5 | ತಳಗಿನಕೆರೆ | ಸೋಮಸಾಗರ | 07 | 10.14.00 | ಸೋಮಸಾಗರ | ಹಾನಗಲ್ | ಹಾವೇರಿ | 14.69058833<br>75.29321333 |
| 6 | ಹಿರೇಕೆರೆ | ಬಸವನಕೊಪ್ಪ | 19 | 26.39.00 | ಹೊಸೂರು | ಶಿಗ್ಗಾಂವ್ | ಹಾವೇರಿ | 14.98007561<br>75.11041984 |
| 7 | ಮಳಲಕಟ್ಟೆ ಕೆರೆ | ಯಲಿವಾಳ | 59 | 16.27.00 | ಭಾರಂಗಿ | ಸೊರಬ | ಶಿವಮೊಗ್ಗ | 14.54315818<br>75.27161697 |
| 8 | ದೊಡ್ಡಕೆರೆ | ಮುಳಥಳ್ಳಿ | 51 | 13.31.00 | ಉಪ್ಪಣಸಿ | ಹಾನಗಲ್ | ಹಾವೇರಿ | 14.69464000<br>75.32388500 |
| 9 | ತಾವರಿಕಟ್ಟಿಕೆರೆ | ಕವುಲಿ | 50 | 07.29.00 | ತೊಗರ್ಸಿ | ಶಿಕಾರಿಪುರ | ಶಿವಮೊಗ್ಗ | 14.44972000<br>75.23457333 |
| 10 | ಹಿರೇಕೆರೆ | ಆಲದಕಟ್ಟಿ | 82 | 12.03.00 | ಆಲದಕಟ್ಟಿ | ಹಾನಗಲ್ | ಹಾವೇರಿ | 14.83817167<br>75.21303167 |
| 11 | ಗಣಿಗಟ್ಟಕೆರೆ | ಮುಳಥಳ್ಳಿ | 91 | 05.12.00 | ಉಪ್ಪಣಸಿ | ಹಾನಗಲ್ | ಹಾವೇರಿ | 14.69805667<br>75.31955333 |
| 12 | ದೇವನಕಟ್ಟೆಕೆರೆ | ಮಡ್ಲೂರು | 130 | 04.31.00 | ಮಡ್ಲೂರು | ಹಿರೇಕೆರೂರು | ಹಾವೇರಿ | 14.60082774<br>75.30639774 |
| 13 | ಜೀನವಡ್ಡಿನಕಟ್ಟ ಕೆರೆ | ಅತ್ತಿಕಟ್ಟಿ | 168 | 13.37.00 | ಸೂಡಂಬಿ | ಬ್ಯಾಡಗಿ | ಹಾವೇರಿ | 14.61091364<br>75.26843785 |
| 14 | ಕರಿಮಂಡಲಕಟ್ಟಿಕೆರೆ | ಸೂಡಂಬಿ | 134 | 06.16.00 | ಸೂಡಂಬಿ | ಬ್ಯಾಡಗಿ | ಹಾವೇರಿ | 14.62548157<br>75.30575092 |
| 15 | ವಡ್ಡಿನಕಟ್ಟಕೆರೆ | ಗುಡ್ಡದಮುಳಥಳ್ಳಿ | 95 | 03.25.00 | ಉಪ್ಪಣಸಿ | ಹಾನಗಲ್ | ಹಾವೇರಿ | 14.70387667<br>75.316115 |
| 16 | ಜೊಂಡಗೆರೆ | ಅಸ್ತಕಟ್ಟಿ | 104 | 03.34.00 | ಬೀರವಳ್ಳಿ | ಕಲಘಟಗಿ | ಧಾರವಾಡ | 15.09118667<br>75.04031167 |
| 17 | ಹೊಸಕೆರೆ | ಮುಗಳಿಕಟ್ಟಿ | 51 | 04.02.00 | ಹುನಗುಂದ | ಶಿಗ್ಗಾಂವ್ | ಹಾವೇರಿ | 14.92349100<br>75.16702000 |
| 18 | ಬುರಲಕೆರೆ | ಮುತ್ತಗಿ | 334 | 03.18.00 | ಮುತ್ತಗಿ | ಕಲಘಟಗಿ | ಧಾರವಾಡ | 15.26493775<br>74.98213949 |
| 19 | ಹಿತ್ತಲಕೆರೆ | ಲಕ್ಕೊಳ್ಳಿ | 04 | 07.25.00 | ಚವಡಳ್ಳಿ | ಮುಂಡಗೋಡ | ಉತ್ತರಕನ್ನಡ | 14.93761833<br>75.01034833 |
| 20 | ದೊಡ್ಡಕೆರೆ | ಜಿನ್ನೂರು | 02 | 12.16.00 | ಜಿನ್ನೂರು | ಕಲಘಟಗಿ | ಧಾರವಾಡ | 15.15846818<br>75.02922729 |
| 21 | ಒಗ್ಗೆಕೆರೆ | ಮುಗಲಕೊಪ್ಪ | 07 | 03.17.00 | ಅಂಡಗಿ | ಶಿರಸಿ | ಉತ್ತರಕನ್ನಡ | 14.59100432<br>74.99379977 |
| 22 | ಗಡಿಹಳ್ಳಿಕೆರೆ | ಗಡಿಹಳ್ಳಿ | 39 | 03.08.00 | ಉಂಚಳ್ಳಿ | ಶಿರಸಿ | ಉತ್ತರಕನ್ನಡ | 14.588295<br>74.88212167 |
| 23 | ಹಾರನಕೆರೆ | ಬೀರವಳ್ಳಿ | 138 | 06.02.00 | ಬೀರವಳ್ಳಿ | ಕಲಘಟಗಿ | ಧಾರವಾಡ | 15.10505327<br>75.06818279 |
| 24 | ಚಿಕ್ಕೆರಿ | ಹುಲಿಕಟ್ಟಿ | 22 | 05.23.00 | ಗುಡ್ಡದಚನ್ನಾಪುರ | ಶಿಗ್ಗಾಂವ್ | ಹಾವೇರಿ | 14.90534000<br>75.20285000 |
| 25 | ಕುರುಬನಕೆರೆ | ಹುಣಸಿಕಟ್ಟೆ | 107 | 06.17.00 | ಆಲದಕಟ್ಟಿ | ಹಾನಗಲ್ | ಹಾವೇರಿ | 14.8445756<br>75.192385 |
| 26 | ಮುದಕಿಕೆರೆ | ಮಸಳಿಕಟ್ಟಿ | 23 | 08.07.00 | ಸೂಳಿಕಟ್ಟಿ | ಕಲಘಟಗಿ | ಧಾರವಾಡ | 15.16385854<br>74.85458710 |
| 27 | ಸರಕಾರಿಕೆರೆ | ದ್ಯಾಮನಕೊಪ್ಪ | 13 | 05.22.00 | ಕಲ್ಲಾಪುರ | ಹಾನಗಲ್ | ಹಾವೇರಿ | 14.70124650<br>75.14818454 |
| 28 | ಕ್ಯಾದಗಿಕೆರೆ | ಮಲವಳ್ಳಿ | 45 | 03.21.00 | ಚವಡಳ್ಳಿ | ಮುಂಡಗೋಡ | ಉತ್ತರಕನ್ನಡ | 14.94590167<br>75.01020500 |
| 29 | ನೇರಲಕಟ್ಟೆಕೆರೆ | ಕೊಂಡೋಜಿ | 151 | 04.25.00 | ಶ್ಯಾಡಗುಪ್ಪಿ | ಹಾನಗಲ್ | ಹಾವೇರಿ | 14.67889167<br>75.163685 |
| 30 | ವಡ್ಡಿನಕೆರೆ | ಘಾಳಪೂಜಿ | 221 | 14.00.00 | ಘಾಳಪೂಜಿ | ಬ್ಯಾಡಗಿ | ಹಾವೇರಿ | 14.64583333<br>75.26951500 |
| 31 | ಗೌಡಕಟ್ಟ ಕೆರೆ | ಬೆನಕನಹಳ್ಳಿ | 44 | 07.14.00 | ಕಬ್ಬೂರು | ಹಾವೇರಿ | ಹಾವೇರಿ | 14.71164<br>75.350507 |
| 32 | ಹಿರೇಕೆರೆ | ಹಳ್ಳಿಬೈಲು | 11 | 10.05.00 | ಕಿರವಾಡಿ | ಹಾನಗಲ್ | ಹಾವೇರಿ | 14.59032<br>75.194416 |
| 33 | ಹಿರೇಕೆರೆ | ಅತ್ತಿಕಟ್ಟೆ | 133 | 23.29.00 | ಸೂಡಂಬಿ | ಬ್ಯಾಡಗಿ | ಹಾವೇರಿ | 14.612328<br>75.28041153 |
| 34 | ಮಲ್ಲನಕೆರೆ | ದುಮ್ಮಿಹಾಳ | 28 | 13.35.00 | ಘಾಳಪೂಜಿ | ಬ್ಯಾಡಗಿ | ಹಾವೇರಿ | 14.61872372<br>75.26799097 |
| 35 | ಮಂಡೆಕೆರೆ | ಗರುಡಹೊನ್ನಳ್ಳಿ | 45 | 04.28.00 | ಬಮ್ಮಿಗಟ್ಟಿ | ಕಲಘಟಗಿ | ಧಾರವಾಡ | 15.09096833<br>75.02029000 |
| 36 | ಹಳಕಟ್ಟಕೆರೆ | ಗುಡ್ಡದಮುಳಥಳ್ಳಿ | 122 | 04.10.00 | ಉಪ್ಪಣಸಿ | ಹಾನಗಲ್ | ಹಾವೇರಿ | 14.70113<br>75.308615 |
| 37 | ವಡಗಟ್ಟಕೆರೆ | ದ್ಯಾವನಕೊಂಡ | 75 | 10.16.00 | ಜಿನ್ನೂರು | ಕಲಘಟಗಿ | ಧಾರವಾಡ | 15.14332935<br>75.01643564 |
| 38 | ಹೀರೆಕೆರೆ(ದೊಡ್ಡಕೆರೆ) | ನಿಟ್ಟೂರು | 146 | 17.27.00 | ಮಡ್ಲೂರು | ಹಿರೇಕೆರೂರು | ಹಾವೇರಿ | 14.57041796<br>75.28074868 |

| ಕ್ರ.ಸಂ | ಕೆರೆಯ ಹೆಸರು | ಊರು | ಸರ್ವೆ ನಂ | ಎಕರೆ | ಪಂಚಾಯತ | ತಾಲೂಕ | ಜಿಲ್ಲೆ | ಜಿಪಿಎಸ್ |
|---|---|---|---|---|---|---|---|---|
| 39 | ಹಾರನಕೆರೆ | ಇಂದೂರು | 48 | 08.35.00 | ಇಂದೂರು | ಮುಂಡಗೋಡ | ಉತ್ತರಕನ್ನಡ | 15.03209667<br>75.03712833 |
| 40 | ನಡಗಟ್ಟಕೆರೆ | ಇನಾಂನೇರಲಗಿ | 128 | 03.02.00 | ಸಮ್ಮಸಗಿ | ಹಾನಗಲ್ | ಹಾವೇರಿ | 14.66866333<br>75.03318333 |
| 41 | ಕರ್ಲಕಟ್ಟಕೆರೆ | ಸೂಡಂಬಿ | 48 | 06.25.00 | ಸೂಡಂಬಿ | ಬ್ಯಾಡಗಿ | ಹಾವೇರಿ | 14.60977205<br>75.30919927 |
| 42 | ಬಾಪನಕಟ್ಟಕೆರೆ | ಹಿರೇಅಣಜಿ | 112 | 07.38.00 | ಹಿರೇಅಣಜಿ | ಬ್ಯಾಡಗಿ | ಹಾವೇರಿ | 14.60205105<br>75.33331528 |
| 43 | ಕಬ್ಬಿನಕೆರೆ | ದುಮ್ಮಿಹಾಳ | 79 | 18.34.00 | ಘಾಳಪೂಜಿ | ಬ್ಯಾಡಗಿ | ಹಾವೇರಿ | 14.61824619<br>75.26341724 |
| 44 | ಸರಕಾರಿಕೆರೆ | ಮುದ್ದಿನಕೊಪ್ಪ | 47 | 15.30.00 | ಸಾತೇನಹಳ್ಳಿ | ಹಿರೇಕೆರೂರು | ಹಾವೇರಿ | 14.58409823<br>75.32545208 |
| 45 | ಕಲಕೆರೆ | ಮಲಕನಕೊಪ್ಪ | 39 | 12.32.00 | ಜಿನ್ನೂರು | ಕಲಘಟಗಿ | ಧಾರವಾಡ | 15.15630662<br>75.04198367 |
| 46 | ವಡ್ಡಿಗಟ್ಟಕೆರೆ | ತುಮರಿಕೊಪ್ಪ | 66 | 06.07.00 | ಹಿರೇಅಣಜಿ | ಬ್ಯಾಡಗಿ | ಹಾವೇರಿ | 14.59374167<br>75.32893500 |
| 47 | ಅಗಸನಕಟ್ಟೆಕೆರೆ | ಸಂತೊಳ್ಳಿ | 21 | 08.22.00 | ಬದನಗೋಡ | ಶಿರಸಿ | ಉತ್ತರಕನ್ನಡ | 14.65012000<br>75.03498667 |
| 48 | ಯರಿಕಟ್ಟಕೆರೆ | ಚೀರನಕೊಪ್ಪ | 106 | 13.34.00 | ಹಿರೇಅಣಜಿ | ಬ್ಯಾಡಗಿ | ಹಾವೇರಿ | 14.61737102<br>75.34014011 |
| 49 | ಬಮ್ಮನಕಟ್ಟಕೆರೆ | ಚಿಕ್ಕಬಾಸೂರು | 11 | 10.13.00 | ಚಿಕ್ಕಬಾಸೂರು | ಬ್ಯಾಡಗಿ | ಹಾವೇರಿ | 14.65702056<br>75.30751242 |
| 50 | ಹಕ್ಕಿತುಂಬಿನಕಟ್ಟಕೆರೆ | ಹಳ್ಳಿಬೈಲ್ | 43 | 03.17.00 | ಕಿರವಾಡಿ | ಹಾನಗಲ್ | ಹಾವೇರಿ | 14.58915333<br>75.18649500 |
| 51 | ರಾಮನಕಟ್ಟಕೆರೆ | ಸೋಮಸಾಗರ | 62 | 09.24.00 | ಸೋಮಸಾಗರ | ಹಾನಗಲ್ | ಹಾವೇರಿ | 14.69573333<br>75.30845833 |
| 52 | ಕಲ್ಲಪ್ಪನಕೆರೆ | ಗರುಡಹೊನ್ನಳ್ಳಿ | 312 | 05.06.00 | ಬಮ್ಮಿಗಟ್ಟಿ | ಕಲಘಟಗಿ | ಧಾರವಾಡ | 15.07955500<br>75.02428000 |
| 53 | ದೊಡ್ಡಕೆರೆ | ನಂದಿಕಟ್ಟಾ | 02 | 18.15.00 | ನಂದಿಕಟ್ಟಾ | ಮುಂಡಗೋಡ | ಉತ್ತರಕನ್ನಡ | 15.03371667<br>74.98840000 |
| 54 | ಕುಡಿಕೆರೆ | ಗರಗ | 87 | 12.27.00 | ಗರಗ | ಧಾರವಾಡ | ಧಾರವಾಡ | 15.57788886<br>74.93358905 |
| 55 | ಹೊಸಕೇರಿ | ಕರಗಿನಕೊಪ್ಪ | 176 | 07.38.00 | ಸಾಲಗಾಂವ | ಮುಂಡಗೋಡ | ಉತ್ತರಕನ್ನಡ | 14.95376667<br>75.04166 |
| 56 | ಕೆರೆಬೆಂಡಿಗಟ್ಟಕೆರೆ | ಇನಾಮಯಲ್ಲಾಪುರ | 08 | 11.30.00 | ಕಲ್ಲಾಪುರ | ಹಾನಗಲ್ | ಹಾವೇರಿ | 14.69838667<br>75.17817500 |
| 57 | ದೊಡ್ಡಕೆರೆ | ಹನುಮನಕೊಪ್ಪ | 164 | 26.03.00 | ಹೀರೂರು | ಹಾನಗಲ್ | ಹಾವೇರಿ | 14.705547<br>75.1000167 |



## ಮನುವಿಕಾಸ ಸಂಸ್ಥೆಯು ಈಡೇಲ್ ಗೀವ್ ಫೌಂಡೇಶನ್ ಸಹಯೋಗದಲ್ಲಿ ಕಳೆದ ಮೂರು ತಿಂಗಳಲ್ಲಿ ಆಯೋಜಿಸಿದ ತರಬೇತಿಗಳ ಯಾದಿ ಈ ಕೆಳಗಿನಂತಿದೆ

| ಕ್ರ.ಸಂ | ದಿನಾಂಕ | ತರಬೇತಿಯ ಹೆಸರು | ಸ್ಥಳ | ಭಾಗವಹಿಸಿದವರ ಸಂಖ್ಯೆ |
|---|---|---|---|---|
| 1 | 29/05/2024 | ಹೈನುಗಾರಿಕಾ ತರಬೇತಿ | ಬಾಲಭವನ, ಸಿದ್ದಾಪುರ | 47 |
| 2 | 23/05/2024 | ಸ್ವ ಸಹಾಯ ಸಂಘದ ಪರಿಕಲ್ಪನಾ ತರಬೇತಿ | ಹಳಿಯಾಳ | 40 |
| 3 | 09/06/2024 | ಸ್ವ ಸಹಾಯ ಸಂಘದ ಪರಿಕಲ್ಪನಾ ತರಬೇತಿ | ಕೋನಳ್ಳಿ, ಕುಮಟಾ | 45 |
| 4 | 15/06/2024 | ಸ್ವ ಸಹಾಯ ಸಂಘದ ಪರಿಕಲ್ಪನಾ ತರಬೇತಿ | ಸಿದ್ದಾಪುರ | 42 |
| 5 | 26/06/2024 | ಸ್ವ ಸಹಾಯ ಸಂಘದ ಪರಿಕಲ್ಪನಾ ತರಬೇತಿ | ಮುಂಡಗೋಡ | 57 |
| 6 | 21/05/2024 | ಸ್ವ ಸಹಾಯ ಸಂಘದ ಒಕ್ಕೂಟ ಸಭೆ | ನಂದವಾಡ, ಕಾರವಾರ | 76 |
| 7 | 22/05/2024 | ಸ್ವ ಸಹಾಯ ಸಂಘದ ಒಕ್ಕೂಟ ಸಭೆ | ಮಧುವನ ಹೊಟೇಲ್, ಶಿರಸಿ | 39 |
| 8 | 24/05/2024 | ಸ್ವ ಸಹಾಯ ಸಂಘದ ಒಕ್ಕೂಟ ಸಭೆ | ಕಾನಸೂರ್, ಸಿದ್ದಾಪುರ | 63 |
| 9 | 29/05/2024 | ಸ್ವ ಸಹಾಯ ಸಂಘದ ಒಕ್ಕೂಟ ಸಭೆ | ಆವರ್ಸಾ, ಅಂಕೋಲಾ | 26 |
| 10 | 31/05/2024 | ಸ್ವ ಸಹಾಯ ಸಂಘದ ಒಕ್ಕೂಟ ಸಭೆ | ಹಳಿಯಾಳ | 73 |
| 11 | 05/06/2024 | ಸ್ವ ಸಹಾಯ ಸಂಘದ ಒಕ್ಕೂಟ ಸಭೆ | ಮುಂಡಗೋಡ | 41 |
| 12 | 18/06/2024 | ಸ್ವ ಸಹಾಯ ಸಂಘದ ಒಕ್ಕೂಟ ಸಭೆ | ಅರೆಂದೂರು, ಸಿದ್ದಾಪುರ | 46 |
| 13 | 19/06/2024 | ಸ್ವ ಸಹಾಯ ಸಂಘದ ಒಕ್ಕೂಟ ಸಭೆ | ಕಾನಗೋಡ, ಸಿದ್ದಾಪುರ | 47 |
| 14 | 19/06/2024 | ಸ್ವ ಸಹಾಯ ಸಂಘದ ಒಕ್ಕೂಟ ಸಭೆ | ಬಮ್ಮಿಗಟ್ಟ, ಕಲಘಟಗಿ | 45 |
| 15 | 21/06/2024 | ಸ್ವ ಸಹಾಯ ಸಂಘದ ಒಕ್ಕೂಟ ಸಭೆ | ಹನುಮಂತಿ, ಶಿರಸಿ | 63 |
| 16 | 23/6/2024 | ಭತ್ತದಲ್ಲಿ ಶ್ರೀ ಪದ್ಧತಿ ತರಬೇತಿ | ಬಂಕಿಕೊಡ್ಲ, ಕುಮಟಾ | 34 |
| 17 | 29/06/2024 | ಭತ್ತದಲ್ಲಿ ಶ್ರೀ ಪದ್ಧತಿ ತರಬೇತಿ | ಬಂಕನಾಳ, ಶಿರಸಿ | 47 |
| 18 | 13/07/2024 | ಭತ್ತದಲ್ಲಿ ಶ್ರೀ ಪದ್ಧತಿ ತರಬೇತಿ | ಜೊಯಿಡಾ | 43 |
| 19 | 30/05/2024 | ಸುಸ್ಥಿರ ಕೃಷಿ ತರಬೇತಿ | ಶೇಟಗೇರಿ, ಅಂಕೋಲಾ | 35 |
| 20 | 18/06/2024 | ಸುಸ್ಥಿರ ಕೃಷಿ ತರಬೇತಿ | ಭಾರತ್ ಸೇವಾದಳ ಹಾಲ್, ಶಿರಸಿ | 47 |
| 21 | 11/07/2024 | ಸುಸ್ಥಿರ ಕೃಷಿ ತರಬೇತಿ | ಕೂಸನೂರು, ಹಾನಗಲ್ | 51 |
| 22 | 13/07/2024 | ಬೀಜ ಸಂರಕ್ಷಣೆ ಹಾಗೂ ಬೀಜ ಬ್ಯಾಂಕ್ ತರಬೇತಿ | ಭಾರತ್ ಸೇವಾದಳ ಹಾಲ್, ಶಿರಸಿ | 59 |
| | | | | |

## ಮನುವಿಕಾಸ ಸಂಸ್ಥೆಯು ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಪ್ರತಿ ತಾಲೂಕಿಗೂ ಸಂಸ್ಥೆಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಗಿನಂತೆ ಸಿಬ್ಬಂದಿಗಳನ್ನು ನೇಮಿಸಿದೆ.

| | | |
|---|---|---|
| ಶಿರಸಿ | ಮಂಜುನಾಥ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 94494 53774 |
| | ಅಶ್ವತ್ಥ ನಾಯ್ಕ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 99011 82957 |
| | ಗಣಪತಿ ಗಾಮದ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 91132 59935 |
| | ಭವಾನಿ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 82960 53961 |
| | ಬಾಲಚಂದ್ರ ಗೌಡ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 94804 16732 |
| ಸಿದ್ದಾಪುರ | ಪುನೀತ್ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 96862 24908 |
| | ನಾಗರಾಜ್ ಹಸ್ಲರ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 70227 63799 |
| ಸೊರಬ | ಪುನೀತ್ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 96862 24908 |
| ಹಳಿಯಾಳ, ದಾಂಡೇಲಿ | ನಿರಂಜನ್ ಕದಂ (ಸ್ವ ಸಹಾಯ ಸಂಘಗಳ ನಿರ್ವಹಣೆ) | 72596 89630 |
| ಮುಂಡಗೋಡ | ಗಣಪತಿ ಯಲಿವಾಳ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 99802 05013 |
| ಹಾನಗಲ್, ಬ್ಯಾಡಗಿ, ಹಿರೇಕೆರೂರ | ಜಗದೀಶ ಈರಣ್ಣನವರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 73380 06242 |
| ಕಲಘಟಗಿ | ಬಸವರಾಜ್ ರಡ್ಡೇರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 9845884293 |
| ಕಾರವಾರ | ಸುಜಾತಾ ದುರ್ಗೇಕರ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 72045 77307 |
| ಅಂಕೋಲಾ | ಮಹೇಶ್ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 82770 02750 |

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ.

MANUVIKASA

# ಮನುವಿಕಾಸ

‘ಶ್ರೀ ಮಾತಾ’ ಬಿಲ್ಡಿಂಗ್, ವಿಜಯನಗರ, ತಾ॥ ಶಿರಸಿ
ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ–581401

**Phone:** +91 98459 82552 **Email:** manuvikasa@gmail.com
**Website** : www.manuvikasa.org